# ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣಾ ಯೋಜನೆ

## ಅ) ಕೃಷಿ ಯಾಂತ್ರೀಕರಣ ಯೋಜನೆ

ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗು ಕೃಷಿಯಲ್ಲಿ ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸಲು ರಾಜ್ಯದಲ್ಲಿ "ಕೃಷಿ ಯಾಂತ್ರೀಕರಣ ಯೋಜನೆಯಡಿ" ಕೃಷಿ ಯಂತ್ರೋಪಕರಣಗಳಿಗೆ ಶೇ.50 ರ ಸಹಾಯಧನವನ್ನು ಒದಗಿಸಲಾಗುತ್ತಿದೆ. 2013-14ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಉಳುಮೆಯಿಂದ ಕೊಯ್ಲುವರೆಗೆ ಉಪಯುಕ್ತವಿರುವ ವಿವಿಧ ಮಾದರಿಯ ಪವರ್ ಟಿಲ್ಲರ್‌ಗಳು, ಡೀಸಲ್ ಪಂಪ್ ಸೆಟ್, ಟ್ರಾಕ್ಟರ್/ಟಿಲ್ಲರ್/ಎಂಜಿನ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಸಹಾಯಧನದಡಿ ವಿತರಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

(ಆರ್ಥಿಕ: ಲಕ್ಷ ರೂ.ಗಳಲ್ಲಿ)

| ಕ್ರ..ಸಂ. | ಲೆಕ್ಕ ಶೀರ್ಷಿಕೆ | ವಲಯ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ |
|---|---|---|---|
| 1. | 2435-00-101-01-29 | ಜಿಲ್ಲಾ ವಲಯ | 632.40 |
| 2. | 2401-00-111-0-02 (106, 422, 423) | ರಾಜ್ಯ ವಲಯ | 13500.00 |
| 3. | ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ 2401-00-100-1-57 (RKVY-133, 422, 423) | ರಾಜ್ಯ ವಲಯ | 7000.00 |
| ಒಟ್ಟು | | | **21132.40** |

<u>ಮಾರ್ಗಸೂಚಿಗಳು</u>

1. ದಿನಾಂಕ 01-04-2013 ರ ನಂತರ ಖರೀದಿಸಿದ ಘಟಕಗಳಿಗೆ ಮಾತ್ರ ಪ್ರಸಕ್ತ ಸಾಲಿನಲ್ಲಿ ಸಹಾಯಧನವನ್ನು ನೀಡುವುದು.
2. ಭಾರತ ಸರ್ಕಾರದಿಂದ ಹೊರಡಿಸಲಾಗುವ ಅನುಮೋದಿತ ಪವರ್ ಟಿಲ್ಲರ್ ಪಟ್ಟಿ ಅನ್ವಯ, ಕೇಂದ್ರ ಕಛೇರಿಯಿಂದ ಅನುಮೋದಿಸಲ್ಪಟ್ಟ ಪವರ್ ಟಿಲ್ಲರ್ ಮಾದರಿಗಳಿಗೆ ಮಾತ್ರ ಸಹಾಯಧನ ಒದಗಿಸುವುದು.
3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಮಹಿಳಾ ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಆದ್ಯತೆ ಮೇರೆಗೆ ಪರಿಗಣಿಸುವುದು.
4. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿಟ್ಟ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳುವುದು.
5. ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ/ವಿತರಕರಿಂದ ಖರೀದಿಸಿದ ಕೃಷಿ ಯಂತ್ರೋಪಕರಣಗಳ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ.
6. ಪ್ರತಿ ಕೃಷಿ ಯಂತ್ರೋಪಕರಣಗಳ ಹಾಗೂ ಕೃಷಿ ಸಂಸ್ಕರಣಾ ಮಾದರಿಗಳಿಗೆ ನಿಗಧಿಪಡಿಸಿದ ಗರಿಷ್ಟ ಸಹಾಯಧನ ಅಥವಾ ಘಟಕದ ಗರಿಷ್ಟ ದರದ ಶೇ.50 (ಕೃಷಿ ಯಂತ್ರೋಪಕರಣಗಳ ದರ ರೂ. 5.00 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ) ಹಾಗೂ ಶೇ.40 (ಕೃಷಿ ಯಂತ್ರೋಪಕರಣಗಳ ದರ ರೂ. 5.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ) ರಷ್ಟು ಸಹಾಯಧನವನ್ನು ನೀಡುವುದು (ಕಂಬೈನ್ಡ್ ಹಾರ್ವೆಸ್ಟರ್ ಹೊರತುಪಡಿಸಿ).
7. ವಿವಿಧ ಘಟಕಗಳಡಿ ಅನುಮೋದಿತ ಸಂಸ್ಥೆಗಳ ಮಾದರಿವಾರು ಗರಿಷ್ಟ ದರವನ್ನು ನೀಡಲಾಗಿದೆ. ರೈತರು ಇಚ್ಛೆ ಪಡುವ ಅನುಮೋದಿತ ಮಾದರಿಯ ದರವನ್ನು ಅನುಮೋದಿತ ತಯಾರಕರೊಂದಿಗೆ ಅಥವಾ ತಯಾರಕರಿಂದ ನೇಮಿಸಲ್ಪಟ್ಟ ಕೇಂದ್ರ ಕಚೇರಿಯಿಂದ ಅನುಮೋದಿತ ಡೀಲರ್‌ನೊಂದಿಗೆ ಪ್ರಚಲಿತ ಮಾರುಕಟ್ಟೆ/ ಅನುಕೂಲಕರ ದರದಲ್ಲಿ ಚರ್ಚಿಸಿ ಚೌಕಾಸಿ ಮಾಡಿ ದರ ನಿಗದಿಪಡಿಸಿಕೊಳ್ಳಲು ಅವಕಾಶವಿರುತ್ತದೆ.
8. ರೈತರು/ಸ್ವಸಹಾಯ ಗುಂಪುಗಳು ಪೂರ್ಣ ಮೊತ್ತವನ್ನು ಪಾವತಿಸಿ ಪಡೆಯಲಿಚ್ಚಿಸಿದ ಸವಲತ್ತನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಮುಖಾಂತರ ಸರಬರಾಜು ಮಾಡುವುದು. ಘಟಕ ಖರೀಧಿಸುವ ಮುನ್ನ ಇಲಾಖೆಗೆ ಅರ್ಜಿ ನೀಡುವುದು ಕಡ್ಡಾಯ.
9. ಸಹಾಯಧನದಡಿ ಸವಲತ್ತನ್ನು ಪಡೆಯಲಿಚ್ಛಿಸುವ ರೈತರು ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ರೈತ ಸಂಪರ್ಕ ಕೇಂದ್ರಕ್ಕೆ ಉಪಕರಣಗಳ/ಟಿಲ್ಲರ್‌ಗಳ ಮಾದರಿಯನ್ನು ನಮೂದಿಸಿ, ಅರ್ಜಿ ಸಲ್ಲಿಸುವುದು. ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸುವುದು.

10. ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದಿತ ತಯಾರಕರ/ಆಮದುದಾರರ/ಹಂಚಿಕೆದಾರ ಸಂಸ್ಥೆಯ ಅನುಮೋದಿತ ಡೀಲರ್‌ಗಳು ಸಂಬಂಧಿಸಿದ ಸಂಸ್ಥೆಯ ಮೇಲು ಸಹಿಯನ್ನು ಬಿಲ್ಲುಗಳ ಮೇಲೆ ಪಡೆದು ಸಲ್ಲಿಸಿದಾಗ ಮಾತ್ರ ಸಹಾಯಧನವನ್ನು ನೀಡುವುದು.
11. ಅರ್ಜಿಯನ್ನು ಪಡೆದ ನಂತರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಬಿಲ್ಲು ತಯಾರಿಸಿ ಒಂದು ವಾರದೊಳಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಮೇಲ್ ರುಜುವಿಗೆ ಸಲ್ಲಿಸುವುದು.
12. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಅಗತ್ಯ ದಾಖಲೆಗಳನ್ನು ಮಾರ್ಗಸೂಚಿಯಂತೆ ಪರಿಶೀಲಿಸಿ ಬಿಲ್ಲು ಪಡೆದ ತಕ್ಷಣ ಬಿಲ್ಲನ್ನು ಮೇಲು ರುಜು ಮಾಡುವುದು. ಅರ್ಜಿ ಸಲ್ಲಿಸಿದ 30 ದಿನದೊಳಗಾಗಿ ಸರಬರಾಜುದಾರರಿಗೆ ಸಹಾಯಧನವನ್ನು ನೀಡುವಂತೆ ಕ್ರಮ ಕೈಗೊಳ್ಳುವುದು.
13. ಸರ್ಕಾರದ ಆದೇಶ ಸಂ:ಕೃಇ/115/ಕೃಮಾಸ, 2011 ದಿ: 19.11.2011 ರನ್ವಯ ಕೃಷಿ ಯಾಂತ್ರೀಕರಣ ಯೋಜನೆಯ ಸಹಾಯಧನ ಕಾರ್ಯಕ್ರಮದಡಿ ವಿವಿಧ ಕೃಷಿ ಯಂತ್ರೋಪಕರಣಗಳ ಸಹಾಯಧನವನ್ನು ಸಂದರ್ಭೋಚಿತವಾಗಿ ರೈತರು ಸವಲತ್ತಿನ ಪೂರ್ಣ ಮೊತ್ತ ಪಾವತಿಸಿದ್ದಲ್ಲಿ ನೇರವಾಗಿ ರೈತರಿಗೆ, ರೈತರು ಸವಲತ್ತನ್ನು ಪಡೆಯಲು ಬ್ಯಾಂಕ್ ಸಾಲ ಮಾಡಿದ್ದಲ್ಲಿ ಸಾಲ ನೀಡಿದ ಬ್ಯಾಂಕ್ ಖಾತೆಗೆ ಅಥವಾ ರೈತರು ವಂತಿಕೆಯನ್ನು ಪಾವತಿಸಿದ್ದಲ್ಲಿ ಸಂಬಂಧಪಟ್ಟ ಸಂಸ್ಥೆಗೆ ಸಹಾಯಧನವನ್ನು ಪಾವತಿ ಮಾಡುವುದು.
14. ಒಬ್ಬರಿಗೆ ಒಂದಕ್ಕಿಂತ ಹೆಚ್ಚಿನ ವಿವಿಧ (ಬೇರೆ ಬೇರೆ) ಸವಲತ್ತುಗಳನ್ನು ಪಡೆಯಲು ಅನುದಾನ ಲಭ್ಯತೆ ನೋಡಿಕೊಂಡು ಅವಕಾಶ ನೀಡುವುದು. ಆದರೆ, ಒಬ್ಬರು ಒಂದು ಸವಲತ್ತನ್ನು ಒಮ್ಮೆ ಮಾತ್ರ ಪಡೆಯಲು ಅರ್ಹರಿರುತ್ತಾರೆ.
15. ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಿರ್ವಹಿಸುವ ಜೇಷ್ಠತಾ ಪಟ್ಟಿ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಸಹಾಯಧನ ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು. ಹಾಗೂ ಸರ್ಕಾರದ ಸುತ್ತೋಲೆಯಂತೆ ಪಜಾ/ಪಪಂ/ಹಿ.ವ/ಮಹಿಳೆಯರಿಗೆ ಆದ್ಯತೆ ನೀಡುವುದು.
16. ರೈತರು/ಸ್ವಸಹಾಯ ಗುಂಪುಗಳು ಸರ್ಕಾರದ ಸಹಾಯಧನ ಹೊರತುಪಡಿಸಿ ತಮ್ಮ ವಂತಿಗೆಯನ್ನು ಡಿ.ಡಿ. ಮೂಲಕ ಪಾವತಿಸಿ ಅಥವಾ ಪೂರ್ಣ ಮೊತ್ತವನ್ನು ಪಾವತಿಸಿ ಇಚ್ಛಿಸಿದ ಅನುಮೋದಿತ ಸವಲತ್ತಿಗೆ ಸಹಾಯಧನ ಪಡೆಯಬಹುದಾಗಿದೆ.
17. ವಿವಿಧ ಲೆಕ್ಕ ಶೀರ್ಷಿಕೆಗಳಡಿ ಸಹಾಯಧನವನ್ನು ಸಮನ್ವಯಗೊಳಿಸಿ ನೀಡುವ ಸನ್ನಿವೇಶಗಳಲ್ಲಿ ಸಹಾಯಧನದ ಬಿಲ್ಲುಗಳನ್ನು ನೀಡುವ ವಿಧಾನ/ಮಾರ್ಗಸೂಚಿ.

ಸಂಪೂರ್ಣ ಸಹಾಯಧನವನ್ನು ಒಂದೇ ಬಿಲ್ಲಿನಲ್ಲಿ ಮಾಡುವಾಗ ಸಮಸ್ಯೆಗಳು ಇರುವುದಿಲ್ಲ. ಆದರೆ, ಕೇಂದ್ರ ಮತ್ತು ರಾಜ್ಯದ ಅನುದಾನವನ್ನು ಪೂರಕವಾಗಿ ಸಮನ್ವಯಗೊಳಿಸಿ ಕೊಡುವ ಸಂದರ್ಭದಲ್ಲಿ ಈ ಕೆಳಕಂಡಂತೆ ಬಿಲ್ಲುಗಳನ್ನು ಪಡೆದು ಸಹಾಯ ಧನವನ್ನು ನೀಡುವುದು.

- ಕೇಂದ್ರ ಮತ್ತು ರಾಜ್ಯದ ಅನುದಾನವನ್ನು ಸಮನ್ವಯಗೊಳಿಸಿ ನೀಡುವ ಸಂದರ್ಭದಲ್ಲಿ ಸಹಾಯಧನದ ಒಂದೇ ಬಿಲ್ಲಿನ 6 ಪ್ರತಿಗಳನ್ನು ನೀಡಬೇಕು.
- ಎಲ್ಲಾ ಪ್ರತಿಗಳ ಮೇಲೆ ಮೂಲ ಸಹಿಯನ್ನು ಹಾಕಬೇಕು.
- ಬಿಲ್ಲಿನ ಮೇಲೆ ಒಟ್ಟು ಸಹಾಯಧನವನ್ನು ನಮೂದಿಸಿ ಅದರ ಕೆಳಗೆ ಕೇಂದ್ರದ ಸಹಾಯಧನ ಹಾಗೂ ರಾಜ್ಯದ ಸಹಾಯಧನವನ್ನು ಪ್ರತ್ಯೇಕಿಸಬೇಕು.
- ಕೇಂದ್ರದ ಹಾಗೂ ರಾಜ್ಯದ ಸಹಾಯಧನಕ್ಕೆ ಗುರುತು ಹಾಕಿದ ತಲಾ ಮೂರು ಪ್ರತಿಗಳನ್ನು ನೀಡುವುದು.
- ಕೇಂದ್ರದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ಕೇಂದ್ರದ ಅನುದಾನಕ್ಕೆ ಡಿ.ಸಿ.ಬಿಲ್ಲನ್ನು (ಸಂದರ್ಭೋಚಿತವಾಗಿ) ತಯಾರಿಸಲು ಉಪಯೋಗಿಸಿಕೊಳ್ಳುವುದು.
- ರಾಜ್ಯದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ರಾಜ್ಯದ ಅನುದಾನಕ್ಕೆ ಡಿ.ಸಿ.ಬಿಲ್ಲನ್ನು (ಸಂದರ್ಭೋಚಿತವಾಗಿ) ತಯಾರಿಸಲು ಉಪಯೋಗಿಸಿಕೊಳ್ಳುವುದು.
- ಕೇಂದ್ರದ ಹಾಗೂ ರಾಜ್ಯದ ಸಹಾಯಧನವನ್ನು ನೀಡಲು ತಯಾರಿಸುವ ಡಿ.ಸಿ.ಬಿಲ್ಲುಗಳನ್ನು ಅನುಕ್ರಮವಾಗಿ ಮೂಲ ಸಂಖ್ಯೆ ಹಾಗೂ ಅದೇ ಸಂಖ್ಯೆಯ (A) ಮತ್ತು (B) ಎಂದು ಗುರುತು ಮಾಡುವುದು. ಉದಾಃ ಕೇಂದ್ರದ ಸಹಾಯಧನಕ್ಕೆ ತಯಾರಿಸಿದ ಡಿ.ಸಿ. ಬಿಲ್ಲು ಸಂ.120(A) ಆದಲ್ಲಿ ಅದೇ ಉಪಕರಣದ ರಾಜ್ಯದ ಅನುದಾನಕ್ಕೆ ತಯಾರಿಸುವ ಡಿ.ಸಿ.ಬಿಲ್ಲಿಗೆ 120 (B) ಎಂದು ನೀಡುವುದು.

18. ಫಲಾನುಭವಿಗಳು ಘಟಕದ ಪೂರ್ಣ ಬೆಲೆಯನ್ನು ನೀಡಿ ಖರೀದಿಸಿದ್ದಲ್ಲಿ ಸಹಾಯಧನವನ್ನು ಪಾವತಿಸುವ ವಿಧಾನಃ

ಕೆಲವು ಸಂದರ್ಭಗಳಲ್ಲಿ ರೈತರೇ ನೇರವಾಗಿ ಅವಶ್ಯಕತೆ ಇರುವ ಘಟಕಗಳಿಗೆ ಪೂರ್ಣ ಬೆಲೆಯನ್ನು ನೀಡಿ ಘಟಕಗಳನ್ನು ಖರೀದಿಸಿರುತ್ತಾರೆ. ನಂತರ ಇಲಾಖೆಗೆ ಸಹಾಯಧನವನ್ನು ನೀಡುವಂತೆ ಅರ್ಜಿ ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಅನುದಾನ ಲಭ್ಯವಿರದೆ ಸಹಾಯಧನವನ್ನು ಪಾವತಿಸಲು ಕಷ್ಟಸಾಧ್ಯವಾಗಿರುತ್ತದೆ. ಮುಂದುವರೆದು, ಒದಗಿಸಿದ ಘಟಕವನ್ನು ಭೌತಿಕವಾಗಿ ಪರೀಕ್ಷಿಸುವುದು ಕಷ್ಟಸಾಧ್ಯವಾಗುತ್ತದೆ. ಇಂತಹ ಸಂದರ್ಭ ಬಂದಾಗ ಸಹಾಯಧನವನ್ನು ಈ ಕೆಳಕಂಡಂತೆ ಪಾವತಿಸುವುದು.

- ಖರೀದಿಸುವ ಮುನ್ನ ರೈತರು ಲಿಖಿತ ರೂಪದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿಯನ್ನು ನೀಡುವುದು.
- ಖರೀದಿಸಿದ ಫಲಾನುಭವಿಯು ಅರ್ಜಿಯೊಂದಿಗೆ ಖರೀದಿಸಿದ ಸವಲತ್ತಿನ ಎಲ್ಲಾ ಅಗತ್ಯ ದಾಖಲಾತಿಗಳನ್ನು ಹಾಗೂ ಫಲಾನುಭವಿಯ ದಾಖಲಾತಿಗಳನ್ನು ಲಗತ್ತಿಸಿ ರೈತ ಸಂಪರ್ಕ ಕೇಂದ್ರ ಅಥವಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಖರೀದಿಸಿದ ಸವಲತ್ತನ್ನು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಯು ಪರಿಶೀಲಿಸಿ ವರದಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಅಗತ್ಯವಿದ್ದಲ್ಲಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಸಹ ಪರಿಶೀಲಿಸುವುದು. ನಂತರ, ಫಲಾನುಭವಿಯಿಂದ ಛಾಯಾಚಿತ್ರ ಮತ್ತು ಇತರೆ ಅಗತ್ಯ ದಾಖಲಾತಿಗಳನ್ನು ಪಡೆದು ಇಲಾಖಾ ಹಾಗೂ ಆರ್ಥಿಕ ನಿಯಮಗಳ ಪ್ರಕಾರ, ಮೇಲೆ ತಿಳಿಸಿದ ಅಂಶಗಳನ್ನು ಅಳವಡಿಸಿ ಫಲಾನುಭವಿಗೆ ಸಹಾಯಧನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಅಥವಾ ಸಾಲ ಒದಗಿಸಿದ ಬ್ಯಾಂಕ್ ಖಾತೆಗೆ ನೇರವಾಗಿ ನೀಡಲು ಕ್ರಮ ಕೈಗೊಳ್ಳುವುದು.
- ರೈತರ ಬೇಡಿಕೆಯ ಮತ್ತು ಸಹಾಯಧನದ ಲಭ್ಯತೆಯ ಆಧಾರದ ಮೇಲೆ ಸಂಬಂಧಿಸಿದ ಸರಬರಾಜುದಾರರಿಗೆ ಸವಲತ್ತನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಮುಖಾಂತರ ಸರಬರಾಜು ಮಾಡಲು ತಿಳಿಸುವುದು. ನೇರವಾಗಿ ಸರಬರಾಜು ಸಂಸ್ಥೆಯ ಮಾರಾಟ ಕೇಂದ್ರದಿಂದ ಫಲಾನುಭವಿಗಳು ಸವಲತ್ತನ್ನು ಪಡೆಯಲು ಅವಕಾಶವಿರುವುದಿಲ್ಲ.
- ಸಹಾಯಧನಕ್ಕಾಗಿ ಸಲ್ಲಿಸುವ ಬಿಲ್ಲಿನೊಂದಿಗೆ ಪಡೆದ ಕೃಷಿ ಯಂತ್ರೋಪಕರಣದ ಕಾರ್ಯ ನಿರ್ವಹಣೆಯ ಗುಣಮಟ್ಟದ ಬಗ್ಗೆ ರೈತರ ತೃಪ್ತಿಕರ ಪತ್ರ ಪಡೆಯುವುದು.

19. ಸವಲತ್ತು ಸರಬರಾಜು ಮಾಡಿದ ನಂತರ ಈ ಕೆಳಕಂಡ ಎಲ್ಲಾ ಮಾಹಿತಿಯನ್ನು ಪ್ರತ್ಯೇಕ ವಹಿಯಲ್ಲಿ ಅನುಬಂಧ–ಅ ರಂತೆ ದಾಖಲಿಸುವುದು.

    a. ಕೃಷಿ ಯಂತ್ರೋಪಕರಣಗಳನ್ನು/ಸಂಸ್ಕರಣಾ ಘಟಕಗಳನ್ನು ಪಡೆದ ಬಗ್ಗೆ ಡೆಲಿವರಿ ಚಲನ್ (ಡೆಲಿವರಿ ಚಲನ್‌ನಲ್ಲಿ ಚಾಸಿಸ್ ನಂ./ ಎಂಜಿನ್ ನಂ.ನ್ನು ಅಗತ್ಯವಿರುವೆಡೆ ನಮೂದಿಸುವುದು)

20. ರೈತರು/ಸ್ವಸಹಾಯ ಗುಂಪುಗಳು ಪಡೆದ ಸವಲತ್ತುನೊಂದಿಗೆ ಫಲಾನುಭವಿಯನ್ನೊಳಗೊಂಡ ಛಾಯಾ ಚಿತ್ರವನ್ನು ಸರಬರಾಜುದಾರರಿಂದ ಪಡೆಯುವುದು. ಸವಲತ್ತಿನ ಮೊತ್ತ ರೂ.20000/– ಕ್ಕಿಂತ ಅಧಿಕವಿದ್ದಲ್ಲಿ ಸದರಿ ಛಾಯಾ ಚಿತ್ರಗಳನ್ನು ವರ್ಷವಾರು ಮತ್ತು ಘಟಕವಾರು ವಿಂಗಡಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು.
21. ಕೃಷಿ ಯಂತ್ರೋಪಕರಣಗಳು/ಕೃಷಿ ಸಂಸ್ಕರಣಾ ಘಟಕಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವಾಗ ಎಂಜಿನ್ ಮತ್ತು ಮೋಟಾರುಗಳು ಕಡ್ಡಾಯವಾಗಿ ISI ಗುರುತು ಹೊಂದಿರಬೇಕು.
22. ಪ್ರತಿ ಮಾಹೆಯ ಅಂತ್ಯಕ್ಕೆ ಸಹಾಯಧನ ಪಡೆದ ಫಲಾನುಭವಿಗಳ ವಿವರಗಳನ್ನು ಗಣಕೀಕರಿಸಿ ಅಂತರ್ಜಾಲದಲ್ಲಿ ಅಳವಡಿಸುವುದು. ಅದೇ ಪಟ್ಟಿಯನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜನ ಪ್ರತಿನಿಧಿಗಳಿಗೆ ಮಾಹಿತಿಯನ್ನು ಸಲ್ಲಿಸುವುದು ಮತ್ತು ಪತ್ರಿಕಾ ಪ್ರಕಟಣೆಗೆ ಜಿಲ್ಲಾ ವಾರ್ತಾಧಿಕಾರಿಗಳು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ನೀಡುವುದು.
23. ರೈತರು/ಸ್ವಸಹಾಯ ಗುಂಪುಗಳು ಪೂರ್ಣ ಮೊತ್ತವನ್ನು ಪಾವತಿಸಿ ಪಡೆಯಲಿಚ್ಛಿಸಿದ ಸವಲತ್ತನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಮುಖಾಂತರ ಸರಬರಾಜು ಮಾಡುವುದು.
24. ಬಿಡುಗಡೆಯಾದ ಅನುದಾನದ ಶೇ.75ರಷ್ಟು ವೆಚ್ಚ ಭರಿಸಿದ ನಂತರ ಕೂಡಲೇ ಕೇಂದ್ರ ಕಛೇರಿಗೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಆಯಾ ತ್ರೈಮಾಸಿಕದಲ್ಲಿ ಬಿಡುಗಡೆಯಾದ ಮೊತ್ತವನ್ನು ಆಯಾ ತ್ರೈಮಾಸಿಕದಲ್ಲೇ ಪ್ರಗತಿ ಸಾಧಿಸುವುದು.

25. ಈ ಯೋಜನೆಯಡಿ ಪ್ರತಿ ಮಾಹೆಯ ಅಂತ್ಯಕ್ಕೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪ್ರತ್ಯೇಕವಾಗಿ ಕೆಳಕಂಡಂತೆ ನೀಡಿರುವ (ಅನುಬಂಧ-ಆ) ನಮೂನೆಗಳೆಂತೆಯೇ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
26. ವರ್ಷಾಂತ್ಯಕ್ಕೆ ಪ್ರಗತಿ ವರದಿಗಳೊಂದಿಗೆ ತಾಳೆಯಾಗುವ ಉಪಯೋಗಿತ ಪತ್ರಗಳನ್ನು ಸಲ್ಲಿಸುವುದು.
27. ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ವಿತರಿಸಿದ ಎಲ್ಲಾ ಘಟಕಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಯು ಪರಿಶೀಲಿಸಿ ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಮತ್ತು ವರದಿಯನ್ನು ತಾಲ್ಲೂಕು ಸಹಾಯಕ ಕೃಷಿ ಅಧಿಕಾರಿಗೆ ವರದಿಯನ್ನು ಸಲ್ಲಿಸುವುದು.
28. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ವಿತರಿಸಿದ ಎಲ್ಲಾ ಘಟಕಗಳನ್ನು ಶೇ. 25 ರಷ್ಟು ಪರಿಶೀಲಿಸಿ ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಮತ್ತು ವರದಿಯನ್ನು ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
29. ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ತಾಲ್ಲೂಕುಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ವಿತರಿಸಿದ ಘಟಕಗಳನ್ನು ಶೇ. 10ರಷ್ಟು ಪರಿಶೀಲಿಸುವುದು.

**ವಿಶೇಷ ಸೂಚನೆ: I.**

1. ಕೃಷಿ ಯಾಂತ್ರೀಕರಣ ವಿಭಾಗಕ್ಕೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪ್ರತ್ಯೇಕವಾಗಿ ಅನುಬಂಧ-ಆ ರಲ್ಲಿ ಸೂಚಿಸಿರುವಂತೆ ತಮ್ಮ ಜಿಲ್ಲೆಯಲ್ಲಿ ವಿತರಿಸಿರುವ ಉಪಕರಣಗಳಿಗೆ ಮಾತ್ರ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕ್ಷೇತ್ರ ಪ್ರಯೋಗ ವಿಭಾಗಕ್ಕೆ ಸಲ್ಲಿಸುವುದು ಹಾಗೂ ಇಮೇಲ್ ಮಾಡುವುದು.

**ವಿಶೇಷ ಸೂಚನೆ : II.**

ಇಲಾಖಾ ಸಹಾಯಧನದಡಿ ವಿತರಿಸಲಾದ/ಪಡೆದ ಎಲ್ಲಾ ಸವಲತ್ತುಗಳ ಮೇಲೆ ಇಲಾಖೆಯು ಶತಮಾನೋತ್ಸವದ ಪ್ರಯುಕ್ತ ನೀಡಲಾಗುವ ಲೋಗೋ/ಎಂಬ್ಲಮ್ ಸಹಿತ "2013-14 ನೇ ಸಾಲಿನಲ್ಲಿ ಕೃಷಿ ಇಲಾಖಾ ಸಹಾಯಧನ ಪಡೆಯಲಾಗಿದೆ" ಎಂದು ಈ ಕೆಳಕಂಡ ವಿವರಗಳೊಂದಿಗೆ ಕಡ್ಡಾಯವಾಗಿ ಸಂಸ್ಥೆಯವರು ಮುದ್ರಿಸುವಂತೆ ನೋಡಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ಪರಿಶೀಲಿಸಿದ ಅಧಿಕಾರಿಗಳೇ ಜವಾಬ್ದಾರಿಯಾಗಿರುತ್ತಾರೆ.

ಉಪಕರಣದ ಮಾದರಿ ಮೇಲೆ ರಿವೀಟ್ ಅಥವಾ ಎಂಬೋಸ್ ಮಾಡುವ ಮಾಹಿತಿ

1. ಸಂಬಂಧಿಸಿದ ಸಂಸ್ಥೆಯ ಹೆಸರು
2. ಬ್ರಾಂಡ್, ತೂಕ ಹಾಗು ಇತರೆ ಅಂಶಗಳುಳ್ಳ ಮಾಹಿತಿಯನ್ನು ಎಂಬೋಸ್ ಮಾಡುವುದು.

(ಎಂಬೋಸ್ ಮಾಡುವುದು ಕಷ್ಟ ಸಾಧ್ಯವಿದ್ದಲ್ಲಿ ಸದರಿ ವಿವರಗಳುಳ್ಳ ಪ್ಲೇಟ್‌ಗಳನ್ನು ತಯಾರಿಸಿ ಯಂತ್ರೋಪಕರಣಗಳಿಗೆ ರಿವೀಟ್ ಮಾಡುವುದು)

2013-14 ನೇ ಸಾಲಿನ ಲೆ.ಶೀ.2435-00-101-0-29 ಜಿಲ್ಲಾ ವಲಯದಡಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕೆ ಜಿಲ್ಲಾವಾರು ಅನುದಾನ ಹಂಚಿಕೆ (ಆರ್ಥಿಕ ಲಕ್ಷ ರೂ ಗಳಲ್ಲಿ)

| ಕ್ರ. ಸಂ | ಜಿಲ್ಲೆ | ನಿಗಧಿಪಡಿಸಿದ ಮೊತ್ತ (ಆರ್ಥಿಕ ಲಕ್ಷ ರೂ ಗಳಲ್ಲಿ) |
|---|---|---|

| | | |
|---|---|---|
| 1 | ಬಾಗಲಕೋಟೆ | 20.00 |
| 2 | ಬೆಂಗಳೂರು (ಗ್ರಾ) | 9.00 |
| 3 | ಬೆಂಗಳೂರು (ನ) | 9.60 |
| 4 | ಬೆಳಗಾವಿ | 15.00 |
| 5 | ಬಳ್ಳಾರಿ | 8.00 |
| 6 | ಬೀದರ್ | 23.40 |
| 7 | ಬಿಜಾಪುರ | 40.00 |
| 8 | ಚಾಮರಾಜನಗರ | 10.00 |
| 9 | ಚಿಕ್ಕಬಳ್ಳಾಪುರ | 10.00 |
| 10 | ಚಿಕ್ಕಮಗಳೂರು | 60.00 |
| 11 | ಚಿತ್ರದುರ್ಗ | 45.00 |
| 12 | ದ.ಕನ್ನಡ | 30.80 |
| 13 | ದಾವಣಗೆರೆ | 15.00 |
| 14 | ಧಾರವಾಡ | 10.00 |
| 15 | ಗದಗ | 25.00 |
| 16 | ಗುಲ್ಬರ್ಗಾ | 20.00 |
| 17 | ಹಾಸನ | 25.00 |
| 18 | ಹಾವೇರಿ | 28.00 |
| 19 | ಕೊಡಗು | 30.00 |
| 20 | ಕೋಲಾರ | 5.00 |
| 21 | ಕೊಪ್ಪಳ | 17.00 |
| 22 | ಮಂಡ್ಯ | 20.00 |
| 23 | ಮೈಸೂರು | 17.00 |
| 24 | ರಾಯಚೂರು | 20.00 |
| 25 | ರಾಮನಗರ | 8.00 |
| 26 | ಶಿವಮೊಗ್ಗ | 43.00 |
| 27 | ತುಮಕೂರು | 25.00 |
| 28 | ಉಡುಪಿ | 20.00 |
| 29 | ಉತ್ತರ ಕನ್ನಡ | 15.00 |
| 30 | ಯಾದಗಿರಿ | 8.60 |
| | ಒಟ್ಟು | 632.40 |

## ಅನುಬಂಧ–ಅ

**ಕೃಷಿ ಯಾಂತ್ರೀಕರಣ ಯೋಜನೆಯಡಿ ವಿತರಿಸಲಾಗುವ ಸೌಲಭ್ಯಗಳಿಗೆ ಬರುವ ಅರ್ಜಿಗಳ ದಾಖಲೆಗಳ ವಹಿ:**

**ಜಿಲ್ಲೆ:** **ಆರ್ಥಿಕ: ಲಕ್ಷ ರೂ.ಗಳಲ್ಲಿ**

| ಜೇಷ್ಠತಾ ಸಂ. | ಅರ್ಜಿ ಪಡೆದ ದಿನಾಂಕ | ರೈತನ ಹೆಸರು | ಸರ್ವೆ ನಂ. | ಗ್ರಾಮ | ರೈತರ ವರ್ಗ (ಸಣ್ಣ/ಅತಿ ಸಣ್ಣ/ಮಧ್ಯಮ/ಇತರೆ) | ನೀಡಿದ ಉಪಕರಣದ ಹೆಸರು |
|---|---|---|---|---|---|---|
| 1 | 2 | 3 | 4 | 5 | 6 | 7 |

| ಮಾದರಿ | ನೊಂದಣಿ/ ಚಾಸಿಸ್/ ಇಂಜಿನ್ ಸಂ. | ಸಂಸ್ಥೆಯ/ ವಿತರಕರ ವಿವರ | ಬಿಲ್ಲಿನ ಸಂ, ದಿನಾಂಕ | ರೈತರ ವಂತಿಕೆ ಪಾವತಿಸಿದ ಹಾಗೂ ಡಿಡಿ ಸಂ., ದಿನಾಂಕ ಮತ್ತು ಮೊತ್ತ. | ಸಹಾಯಧನದ ಮೊತ್ತ |
|---|---|---|---|---|---|
| 8 | 9 | 10 | 11 | 12 | 13 |

| ಒಟ್ಟು ಮೊತ್ತ | ಪರಿಶೀಲನೆ ಮಾಡಿದ ಅಧಿಕಾರಿ | ಡಿ ಸಿ ಬಿಲ್ಲಿನ ಸಂ. ಮತ್ತು ಬಿಲ್ಲು ಮಾಡಿದ ದಿನಾಂಕ | ಡಿ ಸಿ ಬಿಲ್ ಮೇಲು ಸಹಿ ಮಾಡಿದ ದಿನಾಂಕ | ಸಂಸ್ಥೆಗೆ /ಫಲಾನುಭವಿಗೆ ಸಹಾಯಧನ ಪಾವತಿಸಿದ ದಿನಾಂಕ |
|---|---|---|---|---|
| 14 | 15 | 16 | 17 | 18 |

## ಅನುಬಂಧ–ಆ

## 2012–13 ನೇ ಸಾಲಿನ ಕೃಷಿ ಯಾಂತ್ರೀಕರಣ ಯೋಜನೆಯಡಿ (ಎಲ್ಲಾ ಲೆಕ್ಕಶೀರ್ಷಿಕೆಯಡಿ) ಸಾಧಿಸಿದ ಪ್ರಗತಿ ವರದಿ ಸಲ್ಲಿಸುವ ನಮೂನೆ

ಜಿಲ್ಲೆ:– ಭೌತಿಕ: ಸಂಖ್ಯೆಗಳಲ್ಲಿ ಆರ್ಥಿಕ: ಲಕ್ಷ ರೂ.ಗಳಲ್ಲಿ ಮಾಹೆ:

| ಕ್ರ. ಸಂ | ಘಟಕಗಳು | ಭೌತಿಕ ಗುರಿ | ಆರ್ಥಿಕ ಗುರಿ | ಸಾಧನೆ | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | ಸಣ್ಣ ರೈತರು | | ಮಧ್ಯಮ ರೈತರು | | ಪ.ಜಾ | | ಪ.ಪಂ | | ಮಹಿಳೆ | | ಇತರೆ | | ಒಟ್ಟು | |
| | | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| | ಭೂಮಿ ಸಿದ್ಧತಾ ಉಪಕರಣಗಳು | | | | | | | | | | | | | | | | |
| 1 | ಪವರ್ ಟಿಲ್ಲರ್ | | | | | | | | | | | | | | | | |
| 2 | ಎಂ.ಬಿ.ಪ್ಲೋ | | | | | | | | | | | | | | | | |
| 3 | ರೋಟೋವೇಟರ್ | | | | | | | | | | | | | | | | |
| 4 | ಡಿಸ್ಕ್ ಪ್ಲೋ | | | | | | | | | | | | | | | | |
| 5 | ಡಿ ಸ್ಕ್ ಹ್ಯಾರೋ | | | | | | | | | | | | | | | | |
| 6 | ಕಲ್ಟಿವೇಟರ್‌ಗಳು | | | | | | | | | | | | | | | | |
| 7 | ಲೆವೆಲ್ಲರ್ ಬ್ಲೇಡ್ | | | | | | | | | | | | | | | | |
| 8 | ಕೇಜ್ ವ್ಹೀಲ್ | | | | | | | | | | | | | | | | |
| 9 | ಬ್ಲೇಡ್ ಹ್ಯಾರೋ | | | | | | | | | | | | | | | | |
| 10 | ಶುಗರ್ ಕೇನ್ ಸ್ಟಬಲ್ ಶೇವರ್ ಕಮ್ ಕಲ್ಟಿವೇಟರ್ | | | | | | | | | | | | | | | | |
| 11 | ಲೇಜರ್ ಗೈಡೆಡ್ ಲ್ಯಾಂಡ್ ಲಡವೆಲ್ಲರ್ | | | | | | | | | | | | | | | | |
| | ನಾಟಿ/ಬಿತ್ತನೆ ಮಾಡುವ ಉಪಕರಣಗಳು | | | | | | | | | | | | | | | | |
| 12 | ಭತ್ತ ನಾಟಿ ಯಂತ್ರ/ ಪ್ಯಾಡಿ ಪ್ಲ್ಯಾಂಟರ್ | | | | | | | | | | | | | | | | |
| 13 | ಫರೋ ಒಪ್ನರ್/ ರಿಡ್ಜರ್ | | | | | | | | | | | | | | | | |

| ಕ್ರ. ಸಂ | ಘಟಕಗಳು | ಭೌತಿಕ ಗುರಿ | ಆರ್ಥಿಕ ಗುರಿ | ಸಾಧನೆ | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | ಸಣ್ಣ ರೈತರು | | ಮಧ್ಯಮ ರೈತರು | | ಪ.ಜಾ | | ಪ.ಪಂ | | ಮಹಿಳೆ | | ಇತರೆ | | ಒಟ್ಟು | |
| | | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 13 | ಜಿರೋ ಟಿಲ್ ಡ್ರಿಲ್ | | | | | | | | | | | | | | | | |
| 14 | ಸೀಡ್ ಕಮ್ ಫರ್ಟಿಲೈಜರ್ ಡ್ರಿಲ್ | | | | | | | | | | | | | | | | |
| 15 | ರೋಟೋ ಟಿಲ್ ಡ್ರಿಲ್ | | | | | | | | | | | | | | | | |
| 16 | ಶುಗರ್ ಕೇನ್ ಸೆಟ್ ಕಟ್ಟರ್ | | | | | | | | | | | | | | | | |
| 17 | ರೈಸ್ಡ್ ಬೆಡ್ ಪ್ಲಾಂಟರ್ | | | | | | | | | | | | | | | | |
| C | ಅಂತರ ಬೇಸಾಯ ಮಾಡುವ ಉಪಕರಣಗಳು | | | | | | | | | | | | | | | | |
| 18 | ಗ್ರಾಸ್/ವೀಡ್ ಸ್ಲಾಶರ್ | | | | | | | | | | | | | | | | |
| 19 | ರೈಸ್ ಸ್ಟ್ರಾ ಚಾಪರ್ | | | | | | | | | | | | | | | | |
| 20 | ಸಸ್ಯ ಸಂರಕ್ಷಣಾ ಉಪಕರಣಗಳು | | | | | | | | | | | | | | | | |
| | ಕುಯ್ಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು | | | | | | | | | | | | | | | | |
| 21 | ಮಲ್ಟಿ ಕ್ರಾಪ್ ತ್ರೆಶರ್ | | | | | | | | | | | | | | | | |
| 22 | ಗ್ರೌಂಡ್‌ನಟ್ ಡಿಗ್ಗರ್ | | | | | | | | | | | | | | | | |
| 23 | ವಿನ್ನೋಯಿಂಗ ಫ್ಯಾನ್ | | | | | | | | | | | | | | | | |
| 24 | ಶುಗರ್ ಕೇನ್ ಸ್ಟ್ರಿಪ್ಪರ್ | | | | | | | | | | | | | | | | |
| 25 | ಶುಗರ್ ಕೇನ್ ಹಾರ್ವೆಸ್ಟರ್ | | | | | | | | | | | | | | | | |
| 26 | ಶೇಂಗಾ ಸ್ಟ್ರಿಪರ್/ಥ್ರ್ಯಾಶರ್ | | | | | | | | | | | | | | | | |
| 27 | ಹಾರ್ವೆಸ್ಟರ್ ರೀಪರ್ | | | | | | | | | | | | | | | | |
| 28 | ಕಂಬೈನ್ಡ್ ಹಾರ್ವೆಸ್ಟರ್ | | | | | | | | | | | | | | | | |
| 29 | ಟ್ರ್ಯಾಕ್ಟರ್ ಮೌಂಟೆಡ್ ಕಂಬೈನ್ಸ್ | | | | | | | | | | | | | | | | |
| | ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು | | | | | | | | | | | | | | | | |
| 30 | ಶುಗರ್ ಕೇನ್ ತ್ರಾಶ್ ಕಟ್ಟರ್ | | | | | | | | | | | | | | | | |
| 31 | ಚಾಫ್ ಕಟ್ಟರ್ | | | | | | | | | | | | | | | | |

| ಕ್ರ.ಸಂ | ಘಟಕಗಳು | ಭೌತಿಕ ಗುರಿ | ಆರ್ಥಿಕ ಗುರಿ | ಸಾಧನೆ | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | ಸಣ್ಣ ರೈತರು | | ಮಧ್ಯಮ ರೈತರು | | ಪ.ಜಾ | | ಪ.ಪಂ | | ಮಹಿಳೆ | | ಇತರೆ | | ಒಟ್ಟು | |
| | | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| | ಕೃಷಿ ಸಂಸ್ಕರಣಾ ಘಟಕಗಳು | | | | | | | | | | | | | | | | |
| 32 | ದಾಲ್ ಪ್ರೊಸೆಸ್ಸರ್ | | | | | | | | | | | | | | | | |
| 33 | ಮಿನಿ ರೈಸ್ ಮಿಲ್ | | | | | | | | | | | | | | | | |
| 34 | ಮಿನಿ ಆಯಿಲ್ ಎಕ್ಸಪೆಲ್ಲರ್ | | | | | | | | | | | | | | | | |
| 35 | ರಾಗಿ ಪಾಲಿಶಿಂಗ್ ಮೆಷಿನ್ | | | | | | | | | | | | | | | | |
| 36 | ರಾಗಿ ಕ್ಲೀನಿಂಗ್ ಮೆಷಿನ್ | | | | | | | | | | | | | | | | |
| 37 | ಶುಗರ್ ಕೇನ್ ಕ್ರಶರ್ ಯುನಿಟ್ | | | | | | | | | | | | | | | | |
| 38 | ಫ್ಲೋರ್ ಮಿಲ್ | | | | | | | | | | | | | | | | |
| 39 | ಪಲ್ವರೈಸರ್ಸ್ | | | | | | | | | | | | | | | | |
| 40 | ರವಾ/ ಕ್ಯಾಟಲ್ ಫೀಡ್ ಮೆಷಿನ್ | | | | | | | | | | | | | | | | |
| 41 | ಚಿಲ್ಲಿ ಪೌಂಡಿಂಗ್ ಮಷಿನ್ | | | | | | | | | | | | | | | | |
| 42 | ಶಾವಿಗೆ/ ವರ್ಮಿಸೆಲ್ಲಿ ಮೆಷಿನ್ | | | | | | | | | | | | | | | | |
| 43 | ಶುಗರ್ ಕೇನ್ ಜ್ಯೂಸ್ ಮೇಕಿಂಗ್ ಮೆಷಿನ್ | | | | | | | | | | | | | | | | |
| 44 | ವೀಟ್ ಪಾಲಿಶರ್ | | | | | | | | | | | | | | | | |
| 45 | ಡೀಸಲ್ ಪಂಪ್‌ಸೆಟ್ | | | | | | | | | | | | | | | | |
| 46 | ಇತರೆ | | | | | | | | | | | | | | | | |

ಆ) ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ (ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ– RKVY)

- 2013–14 ನೇ ಸಾಲಿನ ಕೃಷಿ ಯಾಂತ್ರೀಕರಣ ಅಭಿಯಾನ ಯೋಜನೆಯಡಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ 114 ಹಿಂದುಳಿದ ತಾಲ್ಲೂಕುಗಳು (ಲೆಕ್ಕ ಶೀರ್ಷಿಕೆ: 2401–00–100–1–57, ಉಪ ಲೆಕ್ಕಶೀರ್ಷಿಕೆ:133 – SDP)
- ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನದಡಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ 114 ಹಿಂದುಳಿದ ತಾಲ್ಲೂಕುಗಳಲ್ಲಿ ಉಳುಮೆ, ಬಿತ್ತನೆಗೆ ಪೂರಕವಾದ ಕೃಷಿ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಘಟಕಗಳನ್ನು ವಿತರಿಸುವುದು. ಈ ಯೋಜನೆಯಡಿ ಭೌತಿಕ ಕಾರ್ಯಕ್ರಮವನ್ನು ಹಾಗೂ ಅನುದಾನವನ್ನು ನಿಗಧಿಪಡಿಸಿದ ತಾಲ್ಲೂಕುಗಳಿಗೆ ಮಾತ್ರ ಉಪಯೋಗಿಸುವುದು ಹಾಗೂ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಕಾರ್ಯಕ್ರಮವನ್ನು ಹಾಗೂ ಅನುದಾನವನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲ.
- ಈ ಯೋಜನೆಯಡಿ ಆರ್ಥಿಕ ವೆಚ್ಚವನ್ನು ಲೆಕ್ಕ ಶೀರ್ಷಿಕೆ: 2401–00–100–1–57 (133) ವಿಶೇಷ ಅಭಿವೃದ್ಧಿ ಯೋಜನೆಯಡಿ ಭರಿಸತಕ್ಕದ್ದು.
- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ವಿಶೇಷ ಘಟಕ (ಲೆಕ್ಕ ಶೀರ್ಷಿಕೆ :2401–00–100–1–57, ಉಪಲೆಕ್ಕ ಶೀರ್ಷಿಕೆ :422) ಮತ್ತು ಗಿರಿಜನ ಉಪಯೋಜನೆ (ಲೆಕ್ಕ ಶೀರ್ಷಿಕೆ:2401–00–100–1–57, ಉಪಲೆಕ್ಕ ಶೀರ್ಷಿಕೆ:423) ಗಳಡಿ ವಿವಿಧ ಕೃಷಿ ಉಪಕರಣಗಳನ್ನು ಸಹಾಯಧನದ ಮುಖಾಂತರ ವಿತರಿಸಲು ಸಹ ಉದ್ದೇಶಿಸಲಾಗಿದೆ.
- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅನುದಾನವನ್ನು ರಾಜ್ಯ ವಲಯದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಜೊತೆ ಸಮನ್ವಯ ಮಾಡಿ 90% ರಷ್ಟು ಸಹಾಯಧನ ಒದಗಿಸಿ ಕಾರ್ಯಕ್ರಮ ಅನುಷ್ಠಾನ ಮಾಡುವುದು.
- ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನದಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಬಿಡುಗಡೆ ಮಾಡುವ ಅನುದಾನವನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಬರುವ ತಾಲ್ಲೂಕುಗಳನ್ನೊಳಗೊಂಡಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಬೇಡಿಕೆಯಂತೆ ಹಂಚಿಕೆ ಮಾಡಬಹುದಾಗಿದೆ.

ಸೂಚನೆ: 1. ಈ ಯೋಜನೆಯಡಿ ಪ್ರತಿ ಮಾಹೆಯ ಅಂತ್ಯಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಬರುವ ಹಿಂದುಳಿದ ತಾಲ್ಲೂಕುಗಳ ತಾಲ್ಲೂಕುವಾರು ವಿಶೇಷ ಅಭಿವೃದ್ಧಿ ಯೋಜನೆಯ ಪ್ರಗತಿ ವರದಿಯನ್ನು ಅನುಬಂಧ–ಇ ರಂತೆ ಹಾಗೂ ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನದಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಅನುಬಂಧ–ಆ ರಂತೆ ಪ್ರತ್ಯೇಕವಾಗಿ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
2. 2013–14ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಹಾಯಧನದಡಿ ನೀಡಿದಂತಹ/ವಿತರಿಸಿದಂತಹ ಎಲ್ಲಾ ಕೃಷಿ ಯಂತ್ರೋಪಕರಣಗಳ ಮೇಲೆ ಇಲಾಖೆಯು ನೀಡುವ ಶತಮಾನೋತ್ಸವದ ಲೋಗೋ/ಎಂಬ್ಲಮ್ ಸಹಿತ "2013–14 ನೇ ಸಾಲಿನಲ್ಲಿ ಕೃಷಿ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಪಡೆದದ್ದು" ಎಂಬ ಬರಹವನ್ನು ತಪ್ಪದೇ ಬರೆಸುವುದು.

<u>ಸಹಾಯಧನದಡಿ ಕೃಷಿ ಯಂತ್ರೋಪಕರಣಗಳ ವಿತರಣೆ:</u>

- 2013–14 ನೇ ಸಾಲಿನಲ್ಲಿ ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ ಕಾರ್ಯಕ್ರಮದಡಿ ಭೂಮಿ ಸಿದ್ಧತೆ, ಬಿತ್ತನೆ, ಅಂತರಬೇಸಾಯ ಉಪಕರಣಗಳು, ಪವರ್ ಟಿಲ್ಲರ್‌ಗಳು, ಡೀಸಲ್ ಪಂಪ್ ಸೆಟ್, ಟ್ರಾಕ್ಟರ್/ಟಿಲ್ಲರ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣ ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ಸಹಾಯಧನದಡಿ ವಿತರಿಸುವ ಕಾರ್ಯಕ್ರಮವಿರುತ್ತದೆ.
- ಕೃಷಿ ಯಂತ್ರೋಪಕರಣಗಳನ್ನು ಈಗಾಗಲೇ ಮೇಲೆ ವಿವರಿಸಿದಂತೆ ಸಹಾಯದಡಿ/ರೈತರ ವಂತಿಕೆಯನ್ನು ಡಿಡಿ ಮೂಲಕ ಪಡೆದು ವಿತರಿಸಲು ಕ್ರಮಕೈಗೊಳ್ಳುವುದು.
- ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಕಾರ್ಯಕ್ರಮದಡಿ ವಿವಿಧ ಕೃಷಿ ಯಂತ್ರೋಪಕರಣಗಳಿಗೆ ನೀಡಬಹುದಾದ ಗರಿಷ್ಠ ಸಹಾಯಧನದ ಮೊತ್ತಕ್ಕೆ ಶೇ.50 ರಷ್ಟು ಸಹಾಯಧನಕ್ಕೆ ಹೊಂದಾಣಿಕೆ ಮಾಡಿ ಉಳಿದ ಸಹಾಯಧನವನ್ನು ಕೃಷಿ ಯಾಂತ್ರೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ: 2401–00–111–0–02 (106) (ರಾಜ್ಯ ವಲಯ) / 2435–00–101–0–29 (ಜಿಲ್ಲಾ ವಲಯ) ಲಭ್ಯವಿರುವ ಅನುದಾನದೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನ ಮಾಡಲು

ಈ ಮೂಲಕ ಅನುಮತಿ ನೀಡಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (ಎನ್‌ಎಫ್‌ಎಸ್‌ಎಂ) ಕಾರ್ಯಕ್ರಮದಡಿ ವಿವಿಧ ಕೃಷಿ ಯಂತ್ರೋಪಕರಣಗಳಿಗೆ ನೀಡಬಹುದಾದ ಗರಿಷ್ಠ ಸಹಾಯಧನದ ಮೊತ್ತ ಮತ್ತು ಕೃಷಿ ಯಾಂತ್ರೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ: 2401–00–111–0–02 (106) (ರಾಜ್ಯ ವಲಯ)/2435–00–101–0–29 (ಜಿಲ್ಲಾ ವಲಯ) ಅಡಿ ಪೂರಕವಾಗಿ ಒದಗಿಸಬಹುದಾದ ಗರಿಷ್ಟ ಸಹಾಯಧನದ ಮೊತ್ತದ ವಿವರವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಎನ್ ಎಫ್ ಎಸ್ ಎಂ ಯೋಜನೆಯಡಿ ವಿತರಿಸಲಾಗುತ್ತಿರುವ | | ಕೃಷಿ ಯಾಂತ್ರೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ: 2401–00–111–0–02 (106) (ರಾಜ್ಯ ವಲಯ) /2435–00–101–0–29 (ಜಿಲ್ಲಾ ವಲಯ) ಯೋಜನೆ ಅಡಿ ಪೂರಕವಾಗಿ ಒದಗಿಸಬಹುದಾದ ಗರಿಷ್ಟ ಸಹಾಯಧನದ ಮೊತ್ತ |
|---|---|---|---|
| | ಕೃಷಿ ಉಪಕರಣಗಳು | ಗರಿಷ್ಟ ಸಹಾಯಧನದ ಮೊತ್ತ | |
| 1 | ರೋಟೋವೇಟರ್ | 30000 | 13000 |
| 2 | ಸೀಡ್ ಕಮ್ ಫರ್ಟಿಲೈಜರ್ ಡ್ರಿಲ್ | 15000 | 9500 |
| 3 | ಜೀರೋ ಟಿಲ್ ಟ್ರಿಲ್ | 15000 | 13500 |
| 4 | ಪವರ್ ವೀಡರ್ | 15000 | 16000 |
| 5 | ಮಲ್ಟಿ ಕ್ರಾಪ್ ತ್ರೆಶರ್ | 15000 | 51000 |
| 5 | ಡೀಸೆಲ್ ಪಂಪ್ ಸೆಟ್ಸ್ | 10000 | 10850 |

**ಸೂಚನೆ: ಲೆಕ್ಕ ಶೀರ್ಷಿಕೆವಾರು ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ಪ್ರತ್ಯೇಕವಾಗಿ ಮುಂದಿನ ದಿನಗಳಲ್ಲಿ ನೀಡಲಾಗುವುದು.**

ಅನುಬಂಧ–ಇ

**2013-14ನೇ ಸಾಲಿನ ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ (RKVY) ಯೋಜನೆಯ ವಿಶೇಷ ಅಭಿವೃದ್ದಿ ಯೋಜನೆಯ(ಎಸ್.ಡಿ.ಪಿ ತಾಲ್ಲೂಕುಗಳ) ಮಾಸಿಕ ಪ್ರಗತಿ ವರದಿಯನ್ನು ಸಲ್ಲಿಸುವ ನಮೂನೆ (ಲೆಕ್ಕ ಶೀರ್ಷಿಕೆ:2401–00–800–1–57(133)**

| ಕ್ರ.ಸಂ. | ವಿಭಾಗ | ಜಿಲ್ಲೆ | ತಾಲ್ಲೂಕು | ಅನುದಾನ ಲಭ್ಯತೆ | ಅನುದಾನ ಬಿಡುಗಡೆ | ಕೃಷಿ ಉಪಕರಣಗಳು | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | | | ಪವರ್ ಟಿಲ್ಲರ್ | | ಹೈಟೆಕ್ ಉಪಕರಣಗಳು | | ಡೀಸೆಲ್ ಪಂಪ್ ಸೆಟ್ಸ್ | | ಪವರ್ ಆಪರೇಟೆಡ್ ಸಸ್ಯ ಸಂರಕ್ಷಣಾ ಉಪಕರಣಗಳು | | ಕೃಷಿ ಸಂಸ್ಕರಣಾ ಘಟಕಗಳು | | ಒಟ್ಟು | |
| | | | | | | ಸಾಧನೆ | | ಸಾಧನೆ | | ಸಾಧನೆ | | ಸಾಧನೆ | | ಸಾಧನೆ | | ಸಾಧನೆ | |
| | | | | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| | | | | | | | | | | | | | | | | | |

# ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆ

(ಕೇಂದ್ರದ ನೆರವು, ಜಿಲ್ಲಾ ಮತ್ತು ರಾಜ್ಯ ವಲಯ)

ನೀರಿನ ಮಿತ ಬಳಕೆ ಪ್ರೋತ್ಸಾಹಿಸಲು ಸೂಕ್ಷ್ಮ ನೀರಾವರಿ ಘಟಕಗಳಿಗಾಗಿ ಶೇ.75 ರ ಸಹಾಯಧನವನ್ನು ನೀಡಲಾಗುತ್ತಿದೆ. 2006–07 ನೇ ಸಾಲಿನಿಂದ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2013–14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

2013–14 ನೇ ಸಾಲಿನಲ್ಲಿ (ಸರ್ಕಾರದ ಆದೇಶದ ಸಂ: ಕೃತೋಇ 103 ಕೃಮುಸ 2010 ದಿನಾಂಕಃ 06.10.2010 ಆದೇಶದಲ್ಲಿ ನೀಡಿದ ಅನುಮತಿ ಅನ್ವಯ) ಸೂಕ್ಷ್ಮ ನೀರಾವರಿ ಘಟಕಗಳಿಗೆ ಶೇ.75 ರಿಯಾಯಿತಿಯನ್ನು ಫಲಾನುಭವಿಗಳಿಗೆ ಒದಗಿಸುವುದು. ಶೇ.75 ರ ಸಹಾಯ ಧನವನ್ನು ಭರಿಸುವಾಗ ಈ ಕೆಳಕಂಡ ಅಂಶಗಳನ್ನು ಖಡ್ಡಾಯವಾಗಿ ಪಾಲಿಸುವುದು.

- ಕೇಂದ್ರ ಸರ್ಕಾರವು ನೀಡುವ ಅನುದಾನದಲ್ಲಿ ಶೇ.40 ಸಹಾಯಧನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಗರಿಷ್ಟ ಮಿತಿಗೊಳಪಟ್ಟು ಮತ್ತು ರಾಜ್ಯ ಸರ್ಕಾರವು ನೀಡುವ ರಾಜ್ಯ (2401–00–108–1–15)/ಜಿಲ್ಲಾ (2435–00–101–0–30) ವಲಯದ ಕಾರ್ಯಕ್ರಮಗಳಲ್ಲಿ ಯಾವುದಾದರೂ ಒಂದು ಯೋಜನೆಯಿಂದ ಶೇ.75 ರ ಸಹಾಯ ಧನಕ್ಕೆ ಪೂರಕವಾಗಿ ಉಳಿದ ಸಹಾಯಧನವನ್ನು ನೀಡುವುದು.
- ಪ್ರತಿಯೊಂದು ಘಟಕ ಮತ್ತು ವಿಸ್ತೀರ್ಣವಾರು ಭರಿಸಬೇಕಾದ ಶೇ.75 ರ ಸಹಾಯದನದಡಿ ಒದಗಿಸಬಹುದಾದ ಗರಿಷ್ಟ ಕೇಂದ್ರದ ಮತ್ತು ರಾಜ್ಯದ ಅನುದಾನ ವಿವರಗಳನ್ನು ನೋಂದಣಿ ಪ್ರಕ್ರಿಯೆಯಲ್ಲಿ ಅನುಮೋದಿತ ತಯಾರಕರ ಕಿರುಹೊತ್ತಿಗೆಯಲ್ಲಿ ನೀಡಲಾಗುತ್ತದೆ. ಅದರಂತೆ ಸಹಾಯಧನವನ್ನು ಭರಿಸುವುದು.
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿಟ್ಟ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳುವುದು.
- ಕೇಂದ್ರ ಸರ್ಕಾರದ ಸಹಾಯಧನದ ಮೊತ್ತವನ್ನು ಕೇಂದ್ರ ಸರ್ಕಾರದ ಸೂಕ್ಷ್ಮ ನೀರಾವರಿಯ ಮಾರ್ಗಸೂಚಿಯಂತೆ ನೀಡುವುದು.
- ಹನಿ ನೀರಾವರಿ ಪ್ರಾತ್ಯಕ್ಷಿಕೆಗಳನ್ನು ಕೇಂದ್ರ ಸರ್ಕಾರದ ಅನುದಾನದಿಂದಲೇ ಶೇ.75 ರ ಸಹಾಯ ಧನವನ್ನು ಒದಗಿಸಿ ಏರ್ಪಡಿಸತಕ್ಕದ್ದು. ಈ ಸಂಬಂಧ ಜಿಲ್ಲಾವಾರು ಪ್ರಚಲಿತ ತಯಾರಕ ಸಂಸ್ಥೆ ಹಾಗು ಪಿ.ಎಫ್.ಡಿ.ಸಿ. ಕೇಂದ್ರ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು ಇವರನ್ನು ಸಂಪರ್ಕಿಸಿ ಹನಿ ನೀರಾವರಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಕ್ರಿಯಾ ಯೋಜನೆಯನ್ನು ತಯಾರಿಸುವುದು.
- ರಾಜ್ಯ ವಲಯದ ಲೆ.ಶೀ. 2401–00–108–1–15 ಮತ್ತು ಜಿಲ್ಲಾ ವಲಯದ ಲೆ.ಶೀ. 2435–00–101–0–30 ರಡಿ ಒದಗಿಸಲಾಗುವ ಅನುದಾನವನ್ನು ಕೇಂದ್ರ ಸರ್ಕಾರದ ಅನುದಾನದೊಂದಿಗೆ ಪೂರಕ ಅನುದಾನವನ್ನಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಹಲವು ಬಾರಿ ಕೇಂದ್ರ ಸರ್ಕಾರದ ಅನುದಾನಕ್ಕೆ ಪೂರಕವಾದ ರಾಜ್ಯ ಸರ್ಕಾರದ ಅನುದಾನದ ಕೊರತೆ ತೀರ್ವವಾಗಿರುತ್ತದೆ. ಈ ಹಿನ್ನಲೆಯಲ್ಲಿ ಯಾವುದೇ ಕಾರಣಕ್ಕೂ ರಾಜ್ಯ ವಲಯದ ಲೆ.ಶೀ. 2401–00–108–1–15 ಮತ್ತು ಜಿಲ್ಲಾ ವಲಯದ ಲೆ.ಶೀ. 2435–00–101–0–30 ರಡಿ ಒದಗಿಸಲಾಗುವ ಅನುದಾನವನ್ನು ಒಂದೇ ಬಿಲ್ಲಿನಲ್ಲಿ ಶೇ.75 ರ ಸಹಾಯಧನವನ್ನು ಭರಿಸಲು ಅವಕಾಶವಿರುವುದಿಲ್ಲ.
- ಜಿಲ್ಲಾ ವಲಯದ ಲೆ.ಶೀ. 2435–00–101–0–30 ಯಡಿ ಒದಗಿಸಲಾಗುವ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಂಡ ನಂತರವೇ ರಾಜ್ಯ ವಲಯದ ಲೆ.ಶೀ. 2401–00–108–1–15 ಅನುದಾನವನ್ನು ಬಳಸಿಕೊಳ್ಳುವುದು.
- ರಾಜ್ಯ ವಲಯದ ಲೆ.ಶೀ. 2401–00–108–1–15 ಅಡಿ ಜಿಲ್ಲೆಗಳ ಬೇಡಿಕೆಯ ಆಧಾರದ ಮೇಲೆ ಬಿಡುಗಡೆಗೊಳಿಸಲಾಗುವುದು.
- ಆರ್ಥಿಕ ವರ್ಷದ ಅಂತ್ಯಕ್ಕೆ ಸಾಧಿಸಲಾದ ಪ್ರಗತಿ ವರದಿಯನ್ನು (ಭೌತಿಕ ಹೆಕ್ಟೇರ್ ಹಾಗು ಆರ್ಥಿಕ ರೂ. ಲಕ್ಷಗಳಲ್ಲಿ) ಉಪಯೋಗಿತ ಪತ್ರಗಳೊಂದಿಗೆ ತಾಳೆ ಹೊಂದಿಸಿ ಏಪ್ರಿಲ್ ಅಂತ್ಯದ ಒಳಗಾಗಿ ಸಲ್ಲಿಸುವುದು.
- ಕೇಂದ್ರ ಸರ್ಕಾರಕ್ಕೆ ಫಲಾನುಭವಿಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಆಡಿಟೆಡ್ ಉಪಯೋಗಿತ ಪತ್ರ ಹಾಗು ಅದಕ್ಕೆ ತಾಳೆಯಾಗುವ ಪ್ರಗತಿ ವರದಿಯನ್ನು ಆಂಗ್ಲ ಭಾಷೆಯಲ್ಲಿ ಸಲ್ಲಿಸುವುದು.

- <u>ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯಡಿ ರೈತರು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.</u>

ಕೃಷಿ ಇಲಾಖೆಯಲ್ಲಿ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಕಾರ್ಯಕ್ರಮದಡಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಸಹಾಯಧನದಡಿ ವಿತರಿಸಲು ರೈತರಿಂದ ಅರ್ಜಿಗಳನ್ನು ಆನ್–ಲೈನ್ ಮೂಲಕ ಸ್ವೀಕರಿಸಲು Web-Portal ರೂಪಿಸಿ ಕ್ರಮ ವಹಿಸುವುದು.

ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನದಡಿ ರೈತರಿಂದ ಆನ್‌ಲೈನ್ ಮೂಲಕ ಅರ್ಜಿ ಪಡೆದು ಅನುಷ್ಠಾನ ಮಾಡಲು ಇಲಾಖಾ ಅಧಿಕಾರಿಗಳು ಮತ್ತು ಲಘು ನೀರಾವರಿ ತಯಾರಕ ಸಂಸ್ಥೆಗಳ ಕಾರ್ಯಗಳು:–

1. ಸೂಕ್ಷ್ಮ ನೀರಾವರಿ ತಯಾರಕ ಸಂಸ್ಥೆ:–ರೈತರಿಂದ ಅರ್ಜಿಯೊಂದಿಗೆ ಕೆಳಕಂಡ ದಾಖಲಾತಿಗಳನ್ನು ಪಡೆಯುವುದು.
   ಆರ್.ಟಿ.ಸಿ., ಫೋಟೊ, ನೀರಿನ ಸಂಪನ್ಮೂಲ ಪತ್ರ, ನೀರಿನ ಹಂಚಿಕೆ ಅಗ್ರಿಮೆಂಟ್, Affidavit (ರೂ.20 ಸ್ಟಾಂಪ್ ಪೇಪರ್) :– ಫಲಾನುಭವಿಯು ಈ ಹಿಂದೆ ಯಾವುದೇ ಸಹಾಯಧನ ಪಡೆದಿರುವುದಿಲ್ಲ ಎಂದು ತಿಳಿಸಬೇಕು.
2. ಸಹಾಯಕ ಕೃಷಿ ನಿರ್ದೇಶಕರು:–
   a. ತಯಾರಕ ಸಂಸ್ಥೆಯವರು ಸಲ್ಲಿಸಿರುವ ಅರ್ಜಿಗಳಿಗೆ ಸ್ವೀಕೃತಿ ಪತ್ರ ಮತ್ತು ಒಪ್ಪಿಗೆ ನೀಡುವುದು.
   b. ಅರ್ಜಿಗಳ ಪರಿಶೀಲಿಸಿ ಅರ್ಹ ಅರ್ಜಿಗಳಿಗೆ ಒಪ್ಪಿಗೆ ನೀಡುವುದು.
3. ತಯಾರಕರು:–
   ಸಹಾಯಕ ಕೃಷಿ ನಿರ್ದೇಶಕರರವರಿಂದ ಪರಿಶೀಲನೆಗೊಂಡ ಅರ್ಹ ಅರ್ಜಿಗಳನ್ನು ಕ್ರ. ಸಂ. 1 ರಲ್ಲಿ ಸೂಚಿಸಿರುವ ದಾಖಲಾತಿಗಳೊಂದಿಗೆ ಆನ್–ಲೈನ್‌ನಲ್ಲಿ Field design & B.o.Q (Bill of Quantity) with estimate ನೊಂದಿಗೆ Upload ಮಾಡುವುದು.
4. ಸಹಾಯಕ ಕೃಷಿ ನಿರ್ದೇಶಕರು :–
   ಆನ್ ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಗಳಿಗೆ ಸ್ವೀಕೃತಿ ನೀಡಿ ಸದರಿ ಅರ್ಜಿಗಳನ್ನು ಆನ್–ಲೈನ್‌ನಲ್ಲಿ ಜಂಟಿ ಕೃಷಿ ನಿರ್ದೇಶಕರಿಂದ ಒಪ್ಪಿಗೆಗೆ ಕಳುಹಿಸುವುದು..
5. ಜಂಟಿ ಕೃಷಿ ನಿರ್ದೇಶಕರು :–
   ತಾಲ್ಲೂಕಿನಿಂದ ಆನ್ ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಕೇಂದ್ರ ಕಛೇರಿಗೆ ಒಪ್ಪಿಗೆಗೆ ಕಳುಹಿಸುವುದು.
6. ಕೇಂದ್ರ ಕಛೇರಿ:–
   a. ಜಿಲ್ಲೆಗಳಿಂದ ಸ್ವೀಕರಿಸಿದ ಅರ್ಜಿಗಳಿಗೆ ಮಂಜೂರಾತಿ ನೀಡುವುದು.
   b. ಕೇಂದ್ರ ಮತ್ತು ರಾಜ್ಯವಲಯ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವುದು.
7. ತಯಾರಕರು:–
   a. ರೈತರಿಂದ ರೈತರ ವಂತಿಕೆಯನ್ನು ಕೇಂದ್ರ ಕಛೇರಿಯಿಂದ ಮಂಜೂರಾದ ಅರ್ಜಿಗಳಿಗೆ ಮಾತ್ರ ಡಿ.ಡಿ. ರೂಪದಲ್ಲಿ ಪಡೆದು ಆನ್–ಲೈನ್‌ನಲ್ಲಿ ಡಿ.ಡಿ. ವಿವರಗಳನ್ನು ಭರ್ತಿ ಮಾಡಿ Soft Copy ಯನ್ನು Upload ಮಾಡುವುದು.
   b. ರೈತರಿಂದ ಪಡೆದ ಡಿ.ಡಿ.ಯನ್ನು ಸಹಾಯಕ ಕೃಷಿ ನಿರ್ದೇಶಕ ರವರಿಗೆ ಸಲ್ಲಿಸುವುದು.
8. ಸಹಾಯಕ ಕೃಷಿ ನಿರ್ದೇಶಕರು :–
   ಆನ್–ಲೈನ್‌ನಲ್ಲಿ ಡಿ.ಡಿ.ವಿವರಗಳನ್ನು ಭರ್ತಿ ಮಾಡಿ ಡಿ.ಡಿ. ಯನ್ನು (Soft Copy) Upload ಮಾಡಿರುವ ಅರ್ಜಿಗಳಿಗೆ Work Order ನೀಡುವುದು ಮತ್ತು ತಯಾರಕ ಸಂಸ್ಥೆಗಳಿಗೆ ಡಿ.ಡಿ.ಯನ್ನು ಹಿಂದಿರುಗಿಸುವುದು.
9. ತಯಾರಕರು :–
   a. ರೈತರ ತಾಕುಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸುವುದು
   b. ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿರುವ ಅರ್ಜಿಗಳಿಗೆ ಬಿಲ್ಲು ಮತ್ತು ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸಿ ಸದರಿ ಪ್ರಮಾಣ ಪತ್ರವನ್ನು Web-Portal ನಲ್ಲಿ Upload ಮಾಡುವುದು.
10. ಸಹಾಯಕ ಕೃಷಿ ನಿರ್ದೇಶಕರು :–
   a. ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆ ಕುರಿತಂತೆ ಕಾರ್ಯಪೂರ್ಣಗೊಳಿಸಿದ ವಿವರಗಳನ್ನು ಮತ್ತು ರೈತರ ವಂತಿಕೆ ವಿವರಗಳನ್ನು Web-Portal ನಲ್ಲಿ ಭರ್ತಿ ಮಾಡುವುದು.
   b. ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸಿ ಸಹಿಗಾಗಿ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮುಂಡಿಸುವುದು.

11. ಜಂಟಿ ಕೃಷಿ ನಿರ್ದೇಶಕರು :–

    ಸಹಾಯಕ ಕೃಷಿ ನಿರ್ದೇಶಕರು ಸಲ್ಲಿಸುವ ಸಾದಿಲ್ವಾರು ಬಿಲ್ಲುಗಳಿಗೆ ಅನುಮೋದನೆ ನೀಡುವುದು.

12. ಸಹಾಯಕ ಕೃಷಿ ನಿರ್ದೇಶಕರು
    a. ಜಂಟಿ ಕೃಷಿ ನಿರ್ದೇಶಕರಿಂದ ಅನುಮೋದನೆಗೊಂಡ ಸಾದಿಲ್ವಾರು ಬಿಲ್ಲುಗಳ ವಿವರಗಳನ್ನು Web-Portal ನಲ್ಲಿ ಭರ್ತಿ ಮಾಡುವುದು.
    b. ತಯಾರಕ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಿದ ವಿವರಗಳನ್ನು Web-Portal ನಲ್ಲಿ ಭರ್ತಿ ಮಾಡುವುದು.
13. ಸಹಾಯಕ ಕೃಷಿ ನಿರ್ದೇಶಕರು:–ತಯಾರಕ ಸಂಸ್ಥೆಗಳು ಬಿಲ್ಲುಗಳನ್ನು ಸಲ್ಲಿಸಿದ 30 ದಿನದೊಳಗೆ ಅನುದಾನ ಪಾವತಿ ಮಾಡುವುದು.

ಸೂಕ್ಷ್ಮ ನೀರಾವರಿ ಘಟಕಗಳನ್ನು ಆನ್–ಲೈನ್ ಮೂಲಕ ರೈತರ ಅರ್ಜಿಗಳನ್ನು ಸ್ವೀಕರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಿರುವ ಮಾದರಿಯಲ್ಲೇ 2013–14 ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮವನ್ನು ಸಹ ಅನುಷ್ಟಾನಗೊಳಿಸುವುದು.

2013–14ನೇ ಸಾಲಿನ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಕಾರ್ಯಕ್ರಮದ ರಾಜ್ಯ ಮತ್ತು ಜಿಲ್ಲಾ ವಲಯದಡಿ ಒದಗಿಸಲಾದ ಅನುದಾನ ವಿವರ

| ಒದಗಿಸಲಾದ ಅನುದಾನ (ರೂ. ಲಕ್ಷ ಗಳಲ್ಲಿ) | |
|---|---|
| ರಾಜ್ಯ | ಜಿಲ್ಲಾ |
| 10000.00 | 626.97 |

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯಡಿ ಕೇಂದ್ರ ಸರ್ಕಾರವು 2013–14ನೇ ಸಾಲಿಗೆ ರೂ. 5250.00 ಲಕ್ಷಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ.

## 2013–14 ನೇ ಸಾಲಿನ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಗಳು

ಈ ಯೋಜನೆಯನ್ನು ನೀರಿನ ಮಿತ ಬಳಕೆಯಲ್ಲಿ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಲ್ಲಿ ರೂಪಿಸಲಾಗಿದೆ.

1. ಸೂಕ್ಷ್ಮ ನೀರಾವರಿಗೆ ವ್ಯಾಪಕ ಪ್ರಚಾರ ನೀಡಲು ಮತ್ತು ಪ್ರೋತ್ಸಾಹಿಸಲು ಸೂಕ್ಷ್ಮ ನೀರಾವರಿ ಪದ್ಧತಿಯ ಉಪಯೋಗಗಳು, ಸಿಗುವ ಸಹಾಯಧನ, ಅನುಮೋದಿತ/ತಯಾರಕ ಸಂಸ್ಥೆಗಳ ವಿವರ ಮತ್ತು ರೈತರ ವಂತಿಗೆಯ ವಿವರಗಳನ್ನೊಳಗೊಂಡ ಭಿತ್ತಿ ಪತ್ರ ಹೊರಡಿಸಿ, ಎಲ್ಲಾ ಗ್ರಾಮ ಪಂಚಾಯ್ತಿ, ರೈತ ಸಂಪರ್ಕ ಕೇಂದ್ರ ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಪ್ರದರ್ಶಿಸುವುದು.
2. ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸುವ ರೈತರಿಂದ ಮೊದಲು ರೈತಸಂಪರ್ಕ ಕೇಂದ್ರ/ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ನಿಗದಿತ ನಮೂನೆಯಲ್ಲಿರುವ ಅರ್ಜಿಯನ್ನು ಪಡೆಯುವು ದು.
3. ಅರ್ಜಿಯೊಂದಿಗೆ –ಪಹಣಿ, ಪರಿಶಿಷ್ಟ ಜಾತಿ/ಪಂಗಡದ ರೈತರಾಗಿದ್ದಲ್ಲಿ ನೀರಿನ ಲಭ್ಯತೆಯ ಪ್ರಮಾಣ ಪತ್ರ ಸದರಿ ಘಟಕಕ್ಕೆ ಇತರೆ ಇಲಾಖೆಗಳಾದ ತೋಟಗಾರಿಕೆ/ರೇಷ್ಮೆ ಇಲಾಖೆಯಿಂದ ಸಹಾಯಧನ ಪಡೆದಿರುವು ದಿಲ್ಲವೆಂಬ ಧೃಡೀಕರಣ ಪತ್ರದ ದಾಖಲೆಗಳನ್ನು ಪಡೆಯುವು ದು.
4. ಸಂಬಂಧಪಟ್ಟ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ನಿರ್ದೇಶಕರುಗಳು ಅರ್ಜಿ ಸಲ್ಲಿಸಿದ ರೈತರ ಸ್ಥಳ ಪರಿಶೀಲನೆ ಕೈಗೊಳ್ಳುವು ದು.
5. ಸಹಾಯಕ ಕೃಷಿ ನಿರ್ದೇಶಕರು ಅರ್ಜಿಗಳನ್ನು ಪರಿಶೀಲಿಸಿ ಜೇಷ್ಠತಾನುಸಾರ ಮಾತ್ರ ರೈತರು ಬಯಸುವ ನೊಂದಣಿ ಪಟ್ಟಿಯಲ್ಲಿ ಅನುಮೋದಿಸಿರುವ ಸಂಸ್ಥೆ / ಡೀಲರ್‌ಗಳಿಗೆ ಅರ್ಜಿಯನ್ನು ನೀಡುವು ದು ಹಾಗೂ ರೈತರ ಕ್ಷೇತ್ರದ ಸಮೀಕ್ಷೆ ಮಾಡಲು ಸಂಬಂಧಿಸಿದವರಿಗೆ ತಿಳಿಸುವು ದು..
6. ಅರ್ಜಿ ಸ್ವೀಕರಿಸಿದ ಸಂಸ್ಥೆ/ಡೀಲರ್ ಸ್ಥಳ ಪರಿಶೀಲಿಸಿ, ಬೆಳೆಗನುಸಾರ ಸೂಕ್ಷ್ಮ ನೀರಾವರಿ ವಿನ್ಯಾಸದ ನಕ್ಷೆ ಮತ್ತು ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಿ ರೈತ ಸಂಪರ್ಕ ಕೇಂದ್ರದ ಮುಖಾಂತರ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಒಂದು ವಾರದೊಳಗೆ ಸಲ್ಲಿಸುವು ದು.

7. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಸರಬರಾಜುದಾರ ಸಂಸ್ಥೆ /ಡೀಲರ್ ಸಲ್ಲಿಸಿದ ಬೆಳೆಗನುಸಾರ ನಕ್ಷೆಯ ವಿನ್ಯಾಸ ಮತ್ತು ಅಂದಾಜು ವೆಚ್ಚವನ್ನು ಪರಿಶೀಲಿಸಿ, 4 ದಿನದೊಳಗಾಗಿ ಅನುಮೋದನೆ ನೀಡುವುದು.
8. ರೈತರ ವಂತಿಗೆಯನ್ನು ಡಿ.ಡಿ. ರೂಪದಲ್ಲಿ ಮಾತ್ರ ಸಂಬಂಧಪಟ್ಟ ಸರಬರಾಜುದಾರ/ಡೀಲರ್ ಹೆಸರಿನಲ್ಲೇ ಪಡೆದು, ಸಂಬಂಧಪಟ್ಟ ಸರಬರಾಜುದಾರರ ಸಂಸ್ಥೆಗೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಕಾರ್ಯಾದೇಶ ನೀಡುವುದು.
9. ಅನುಷ್ಠಾನಗೊಳಿಸಲು ಕಾರ್ಯಾದೇಶ ಪಡೆದ ಸಂಸ್ಥೆಯು ಸೂಕ್ಷ್ಮ ನೀರಾವರಿ ಘಟಕಗಳನ್ನು ಸಂಬಂಧಿಸಿದ ರೈತರ ಕ್ಷೇತ್ರದಲ್ಲಿ ಸಂಬಂಧಪಟ್ಟ ಕೃಷಿ ಸಹಾಯಕರ ಸಮ್ಮುಖದಲ್ಲೇ ಸರಬರಾಜುದಾರರು ಸ್ವಂತ ಖರ್ಚಿನಲ್ಲಿ ರೈತರ ಜಮೀನಿನಲ್ಲಿ ಅಳವಡಿಸುವುದು.
10. ಘಟಕ ಅಳವಡಿಸುವ ಸಮಯದಲ್ಲಿ ಬಿಲ್ಲಿನ ಪ್ರಕಾರ ಸಾಮಗ್ರಿಗಳು ಬಂದಿರುವ ಬಗ್ಗೆ ಪರಿಶೀಲಿಸಿ ಖಾತರಿ ಮಾಡಿಕೊಂಡು ನಂತರ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಮುಖ್ಯ ಪೈಪು, ಉಪ ಮುಖ್ಯ ಪೈಪು, ಲ್ಯಾಟರಲ್ಸ್, HDPE ಪೈಪುಗಳು, ಅಲ್ಯುಮಿನಿಯಂ ಪೈಪುಗಳು, ಫಿಲ್ಟರ್‌ಗಳು, ಟಿ–ಜಾಯಿಂಟ್ ಮತ್ತು Sprinkler Head ಇತ್ಯಾದಿಗಳಲ್ಲಿ ನಿಗಧಿತ ರೀತಿಯಲ್ಲಿ ಮುದ್ರಿಸಿರುವ BIS ಗುರುತುಗಳನ್ನು ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ/ಕೃಷಿ ಸಹಾಯಕರು ಪರಿವೀಕ್ಷಿಸಿ, ದೃಢೀಕರಣ ಪತ್ರವನ್ನು ಹಾಗು ಸಂಬಂಧಿಸಿದ ರೈತರಿಂದ ತೃಪ್ತಿಕರ ಅಳವಡಿಕೆಯ ದೃಢೀಕರಣ ಪತ್ರ ಪಡೆದು, ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಿಗೆ ಅನುಷ್ಠಾನಗೊಳಿಸಿದ ಮೂರು ದಿನದೊಳಗಾಗಿ ಸಲ್ಲಿಸುವುದು.
11. ಈ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಬೇಕು.
    ಅ) ಅಳವಡಿಸಿದ ವಿನ್ಯಾಸವು ತೃಪ್ತಿಕರವಾಗಿರಬೇಕು.
    ಆ) ಹನಿ ನೀರಾವರಿ ಪದ್ಧತಿಯಲ್ಲಿ ಒಂದೇ ಲ್ಯಾಟರಲ್ಲಿಗೆ ಅಳವಡಿಸಿದ ಮೊದಲನೆ ಹಾಗೂ ಕೊನೆಯ ಡ್ರಿಪ್ಪರ್‌ನಲ್ಲಿ ಹೊರಸೂಸುವ ನೀರಿನ ಪ್ರಮಾಣದ ವ್ಯತ್ಯಾಸ ಶೇ.10ನ್ನು ಮೀರಬಾರದು.
    ಇ) ಬಿಲ್ಲಿನಲ್ಲಿ/ಡೆಲಿವರಿ ಚಲನ್‌ನಲ್ಲಿ ನಮೂದಿಸಿದನ್ವಯ ಸಾಮಗ್ರಿಗಳು ಸರಬರಾಜು ಆಗಿರಬೇಕು ಹಾಗೂ ಹೊಂದಾಣಿಕೆ ಇರಬೇಕು.
    ಈ) ರೈತರಿಗೆ ಕಡ್ಡಾಯವಾಗಿ ಸೂಕ್ಷ್ಮ ನೀರಾವರಿ ಪದ್ಧತಿ ಬಳಕೆ ಬಗ್ಗೆ ತರಬೇತಿ ಆಗಿರಬೇಕು.
12. ಹನಿ/ ತುಂತುರು ನೀರಾವರಿ ಘಟಕಗಳ ಸಹಾಯಧನಕ್ಕೆ ತಯಾರಕ ಸಂಸ್ಥೆಯ/ಡೀಲರ್ ಬಿಲ್ಲುಗಳಾದಲ್ಲಿ, ತಯಾರಕ ಸಂಸ್ಥೆಯಿಂದ ಅನುಮೋದಿಸಲ್ಪಟ್ಟ ಬಿಲ್ಲುಗಳನ್ನು ಮಾತ್ರ ಪಡೆಯುವುದು. ಬಿಲ್ಲುಗಳಲ್ಲಿ ಕಡ್ಡಾಯವಾಗಿ VAT ನಂಬರ್ ಹಾಗೂ ಈ ಕುರಿತ ತೆರಿಗೆ ಬಾಬ್ತನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
13. ಪ್ರತಿಯೊಂದು ಸಹಾಯಧನದ ಬಿಲ್ಲು ಅಥವಾ ಸಾಧಿಲ್ವಾರು ಬಿಲ್ಲುಗಳೊಂದಿಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ತೃಪ್ತಿಕರ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆಯ ಬಗ್ಗೆ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.

### ಪ್ರಮಾಣ ಪತ್ರ

ನಾನು ----------------------------------ದಿನಾಂಕ:-------------------------ರಂದು ----------------------------ತಾಲ್ಲೂಕಿನ ---------------------------ಹೋಬಳಿಯ--- ---------------------------ಗ್ರಾಮದ -------------------------ರೈತರ ಕ್ಷೇತ್ರದಲ್ಲಿ ಅಳವಡಿಸಿದ ಸೂಕ್ಷ್ಮ ನೀರಾವರಿ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಸಲಕರಣೆಗಳ ಮೇಲೆ ಪರಿಶೀಲಿಸಿರುತ್ತೇನೆ. ಬಿಲ್ಲಿನಲ್ಲಿ ನಮೂದಿಸಿದ ಸಾಮಗ್ರಿಗಳು ಹಾಗೂ ಪ್ರಮಾಣ ಮತ್ತು ಸರಬರಾಜು ಹಾಗೂ ಅಳವಡಿಸಿದ ಸಾಮಗ್ರಿ ಹಾಗೂ ಪ್ರಮಾಣ ತಾಳೆಯಾಗುತ್ತದೆ. ಸದರಿ ಸಲಕರಣೆಗಳ ಪ್ರಮಾಣ ಮತ್ತು ಗುಣಮಟ್ಟಗಳು ಸದರಿ ಕ್ಷೇತ್ರದಲ್ಲಿ ಸೂಕ್ಷ್ಮ ನೀರಾವರಿ ಅಳವಡಿಸಲು ತಯಾರಿಸಿದ ವಿನ್ಯಾಸ ಮತ್ತು ಅಂದಾಜು ಪಟ್ಟಿಗೆ ಹೊಂದಾಣಿಕೆಯಾಗುತ್ತದೆ ಎಂದು ದೃಢೀಕರಿಸುತ್ತೇನೆ.

ಕೃಷಿ ಅಧಿಕಾರಿ,-------------
------ ರೈತ ಸಂಪರ್ಕ ಕೇಂದ್ರ

ಮೇಲು ಸಹಿಗೊಳಿಸಿದೆ.
ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು.

14. ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು ಕಂಪನಿವಾರು ಅಳವಡಿಸಿದ ಕ್ಷೇತ್ರಗಳ ಎಲ್ಲಾ ತಾಕುಗಳನ್ನು ಪರಿವೀಕ್ಷಿಸಿ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಸಲಕರಣೆಗಳ ಮೇಲೆ ಪರಿಶೀಲಿಸಿ ಗುಣಮಟ್ಟ ಖಾತ್ರಿಪಡಿಸಿಕೊಂಡ ನಂತರವೇ ಬಿಲ್ಲುಗಳನ್ನು ಮಾಡುವುದು.

15. ಸಹಾಯಕ ಕೃಷಿ ನಿರ್ದೇಶಕರುಗಳು ಕಂಪನಿವಾರು ಅಳವಡಿಸಿದ ಕ್ಷೇತ್ರಗಳ ಅನಿಯತವಾಗಿ ಶೇ.25 ರಷ್ಟು ತಾಕುಗಳನ್ನು ಪರಿವೀಕ್ಷಿಸಿ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಸಲಕರಣೆಗಳ ಮೇಲೆ ಪರಿಶೀಲಿಸಿ ಗುಣಮಟ್ಟ ಖಾತ್ರಿಪಡಿಸಿಕೊಂಡ ನಂತರವೇ ಬಿಲ್ಲುಗಳನ್ನು ತಯಾರು ಮಾಡುವುದು.

16. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಕಂಪನಿವಾರು ಅಳವಡಿಸಿದ ಕ್ಷೇತ್ರಗಳ ಅನಿಯತವಾಗಿ ಶೇ.10 ರಷ್ಟು ತಾಕುಗಳನ್ನು ಪರಿವೀಕ್ಷಿಸಿ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಸಲಕರಣೆಗಳ ಮೇಲೆ ಪರಿಶೀಲಿಸಿ ಗುಣಮಟ್ಟ ಖಾತ್ರಿಪಡಿಸಿಕೊಂಡ ನಂತರವೇ ಬಿಲ್ಲುಗಳನ್ನು ಮೇಲುರುಜು ಮಾಡುವುದು

17. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞ) ರಾಜ್ಯ ಸೂಕ್ಷ್ಮ ನೀರಾವರಿ ಸಂಘದ ಪ್ರತಿನಿಧಿ, ಯಾವುದೇ ಸಂಬಂಧವಿಲ್ಲದ ಮೂರನೇ ಸಂಸ್ಥೆಯ ಪ್ರತಿನಿಧಿ (ಜಿಲ್ಲಾ ಮಟ್ಟದ ಸೂಕ್ಷ್ಮ ನೀರಾವರಿ ಅನುಷ್ಟಾನ ಸಮಿತಿಯ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ) ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಪ್ರತಿನಿಧಿಗಳನ್ನೊಳಗೊಂಡ ಒಂದು ಜಂಟಿ ಪರಿಶೀಲನಾ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯು ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿದ ಕ್ಷೇತ್ರಗಳ ಪರಿವೀಕ್ಷಣಾ ಕಾರ್ಯ ಕೈಗೊಂಡು ಗುಣಮಟ್ಟದ ಬಗ್ಗೆ ಪರೀಕ್ಷಿಸಿ ರೈತರ ಅಭಿಪ್ರಾಯದೊಂದಿಗೆ ವರದಿಯನ್ನು ಇಲಾಖೆಗೆ ತಪ್ಪದೆ ಪ್ರತಿ ತ್ರೈಮಾಸಕಕ್ಕೊಮ್ಮೆ ನೀಡುವುದು ಜಂಟಿ ಕೃಷಿ ನಿರ್ದೇಶಕರ ಆದ್ಯ ಕರ್ತವ್ಯವಾಗಿರುತ್ತದೆ.

18. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ನಿರ್ದೇಶಕರ ತೃಪ್ತಿಕರ ಸೂಕ್ಷ್ಮ ನೀರಾವರಿ ಅಳವಡಿಕೆ ಪ್ರಮಾಣ ಪತ್ರವಿದ್ದಲ್ಲಿ ಮಾತ್ರ ಹುಂಡಿಗಳನ್ನು ಮೇಲುರುಜು /ರುಜು ಮಾಡುವುದು.

19. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಅನುಷ್ಠಾನಾಧಿಕಾರಿಯಾಗಿದ್ದು, ಸಹಾಯಧನವನ್ನು ಜಂಟಿ ಕೃಷಿ ನಿರ್ದೇಶಕರ ಖಾತೆಯಿಂದಲೇ ಚೆಕ್ ಮುಖಾಂತರ ಮಂಜೂರು ಮಾಡುವುದು (ಕೇಂದ್ರ ಸರ್ಕಾರದ ಪಾಲಿನ ಅನುದಾನ).

20. ಸರಬರಾಜುದಾರ ಸಂಸ್ಥೆಗೆ ಹುಂಡಿ ಸ್ವೀಕರಿಸಿದ 20 ದಿನದೊಳಗಾಗಿ ರೈತರ ವಂತಿಗೆಯೊಂದಿಗೆ ಸರ್ಕಾರದ ಸಹಾಯಧನವನ್ನು ಸೇರಿಸಿ ನೀಡುವುದು.

21. ಸಂಪೂರ್ಣ ಪ್ರಕ್ರಿಯೆಯನ್ನು ರೈತರ ಅರ್ಜಿ ಸ್ವೀಕರಿಸಿದ 40 ದಿನದೊಳಗಾಗಿ ಪೂರ್ಣಗೊಳಿಸತಕ್ಕದ್ದು.

22. ಗಿರಿಜನ ಉಪ ಯೋಜನೆ ಮತ್ತು ವಿಶೇಷ ಘಟಕ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಪ.ಪಂ ಮತ್ತು ಪ.ಜಾತಿಗೆ ಸೇರಿದ ರೈತರಿಗೆ ಮಾತ್ರ ಸಹಾಯಧನ ಒದಗಿಸಲು ಉಪಯೋಗಿಸತಕ್ಕದ್ದು.

23. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಒಬ್ಬ ರೈತರಿಗೆ ಹನಿ ನೀರಾವರಿ ಘಟಕಗಳಿಗೆ ಗರಿಷ್ಠ ರೂ. 98550/- ಮತ್ತು ತುಂತುರು ನೀರಾವರಿ ಘಟಕಗಳಿಗೆ ಗರಿಷ್ಠ ರೂ. 24550/- ಗಳ ಸಹಾಯಧನ ಒದಗಿಸಬಹುದಾಗಿದೆ. (ಸರ್ಕಾರದ ಆದೇಶ ಸಂ:ಕೃಇ/161/ಕೃಯೋಕಾ/2011, ಬೆಂಗಳೂರು, ದಿ:30-01-2012 ರನ್ವಯ).

## ಸಾಲ ಪಡೆಯುವ ರೈತರಾದಲ್ಲಿ (Loanee farmer)

1. ಅರ್ಜಿಯ ಜೊತೆಗೆ ಸಂಬಂಧಿಸಿದ ಬ್ಯಾಂಕುಗಳ ಅವಶ್ಯಕ ಕಡತಗಳೊಂದಿಗೆ ರೈತ ಸಂಪರ್ಕ ಕೇಂದ್ರದ ಮೂಲಕ ಇದರ ಮೇಲೆ ಹೇಳಿದ ದಾಖಲಾತಿಗಳೊಂದಿಗೆ ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
2. ಸಹಾಯಕ ಕೃಷಿ ನಿರ್ದೇಶಕರು ಫಲಾನುಭವಿ ಅಪೇಕ್ಷಿತ ಸರಬರಾಜುದಾರರಿಗೆ ಸ್ಥಳ ಪರಿಶೀಲನೆ ಮಾಡಿ ಯೋಜನೆ ಮತ್ತು ಅಂದಾಜು ಪಟ್ಟಿಯನ್ನು ಒಂದು ವಾರದೊಳಗಾಗಿ ತಯಾರಿಸಿ ಸಲ್ಲಿಸಲು ಸೂಚಿಸುವುದು.
3. ಫಲಾನುಭವಿ, ಸಂಬಂಧಿಸಿದ ಬ್ಯಾಂಕ್ ಹಾಗೂ ಸಂಬಂಧಿಸಿದ ಸರಬರಾಜುದಾರರುಗಳ Tripartiate ಅಗ್ರಿಮೆಂಟ್‌ನೊಂದಿಗೆ ಪ್ರತಿಯನ್ನು ಸಹಾಯಕ ಕೃಷಿ ನಿರ್ದೇಶಕರು ಸೂಕ್ಷ್ಮ ನೀರಾವರಿ ಘಟಕಗಳ ಸರಬರಾಜುದಾರರು ಹಾಗೂ ಸಂಬಂಧಿಸಿದ ಬ್ಯಾಂಕುಗಳಿಗೆ ಸಲ್ಲಿಸುವುದು. ಫಲಾನುಭವಿ/ಸರಬರಾಜು ಸಂಸ್ಥೆಯವರು ಈ ಬಗ್ಗೆ ವ್ಯವಸ್ಥೆ ಮಾಡುವುದು.

4. ಸಹಾಯಕ ಕೃಷಿ ನಿರ್ದೇಶಕರು ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಅನುಮೋದಿಸಿ ಸಂಬಂಧಿಸಿದ ಬ್ಯಾಂಕಿಗೆ ರಿಯಾಯ್ತಿ ಸೌಲಭ್ಯದ ವಿವರಗಳೊಂದಿಗೆ ಸಾಲ ಮಂಜೂರಾತಿಗಾಗಿ ಕಳುಹಿಸುವುದು.
5. ಸಹಾಯಕ ಕೃಷಿ ನಿರ್ದೇಶಕರು ಬ್ಯಾಂಕಿನಿಂದ ಸಾಲ ಮುಂಜೂರಾತಿ ಪ್ರತಿಯನ್ನು ಪಡೆದು ಸಂಬಂಧಿಸಿದ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ಅನುಷ್ಠಾನಗೊಳಿಸಲು ನೀಡುವುದು.
6. ಸಾಮಾನ್ಯ ಸೂಚನೆಗಳು 9 ರಿಂದ 13 ರಂತೆ ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಸಹಾಯಕ ಕೃಷಿ ನಿರ್ದೇಶಕರು ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸುವುದು. ಇದೇ ಸಮಯದಲ್ಲಿ ಸಂಬಂಧಿಸಿದ ಬ್ಯಾಂಕುಗಳಿಗೆ ಅನುಷ್ಠಾನ ದೃಢೀಕರಣ ಪತ್ರವನ್ನು ಕಳುಹಿಸುವುದು ಮತ್ತು ಸಾಲದ ಮೊತ್ತವನ್ನು ಸಂಬಂಧಿಸಿದ ಕಂಪನಿಗಳಿಗೆ ಚೆಕ್ ಅಥವಾ ಡಿ.ಡಿ. ಮುಖಾಂತರ ಫಲಾನುಭವಿಗಳ ಮೂಲಕ ನೀಡಲು ಕೋರುವುದು.
7. ನಂತರ ಸಾಮಾನ್ಯ ಸೂಚನೆಗಳು ಸಂ.14 ರಿಂದ 20 ರ ವರೆಗಿನವುಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
8. ಸೂಕ್ಷ್ಮ ನೀರಾವರಿ ಘಟಕದ ಪೂರ್ಣ ಮೊತ್ತಕ್ಕೆ ಸಾಲ ಮಂಜೂರಾಗಿದ್ದಲ್ಲಿ, ಸರ್ಕಾರಿ ಸಹಾಯಧನದ ವಂತಿಕೆಯನ್ನು ಸಂಬಂಧಿಸಿದ ಫಲಾನುಭವಿಯ ಸಾಲದ ಖಾತೆಗೆ ಜಮಾ ಮಾಡಿ ಫಲಾನುಭವಿಗೆ ಮಾಹಿತಿ ನೀಡುವುದು.
9. ರೈತರ ವಂತಿಕೆಗೆ ಮಾತ್ರ ಸಾಲ ಮಂಜೂರಾಗಿದ್ದಲ್ಲಿ ಸಹಾಯಧನದ ಮೊತ್ತವನ್ನು ನೇರವಾಗಿ ಸಂಬಂಧಿಸಿದ ಸಂಸ್ಥೆಗೆ ಡಿ.ಡಿ. ಅಥವಾ ಚೆಕ್ ಮುಖಾಂತರ ನೀಡಿ ಫಲಾನುಭವಿಗಳಿಗೆ ಮಾಹಿತಿಯನ್ನು ನೀಡುವುದು.

- ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಇಲಾಖಾ ನೊಂದಣಾ ಸುತ್ತೋಲೆಗಳನ್ವಯ ವಿತರಿಸುವುದು
- ಕೇಂದ್ರ ಸರ್ಕಾರವು ನೀಡುವ ಅನುದಾನದಲ್ಲಿ ಶೇ.40 ಸಹಾಯಧನವನ್ನು ಮತ್ತು ರಾಜ್ಯ/ಜಿಲ್ಲಾ ವಲಯದ ಕಾರ್ಯಕ್ರಮಗಳಲ್ಲಿ ಒಂದು ಯೋಜನೆಯಿಂದ ಉಳಿದ ಸಹಾಯಧನವನ್ನು ನೀಡತಕ್ಕದ್ದು.
- ರೈತರ ಹಿಡುವಳಿ ಕ್ಷೇತ್ರ ಆಧರಿಸಿ (Prorata basis) ಅಂಶ–1ರಲ್ಲಿ ಸೂಚಿಸಿದನ್ವಯ ರಿಯಾಯಿತಿ ದರಗಳನ್ನು ಮಿತಿಗೊಳಿಸತಕ್ಕದ್ದು.
- ಒಬ್ಬ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್ ಕ್ಷೇತ್ರಕ್ಕೆ ಮಾತ್ರ ಸೌಲಭ್ಯವನ್ನು ವಿತರಿಸತಕ್ಕದ್ದು. ನೊಂದಾಯಿತ ಅಧಿಕೃತ ಸಂಘ–ಸಂಸ್ಥೆಗಳಿಗೂ ಸಹ ಈ ಕಾರ್ಯಕ್ರಮದಡಿ ಸೌಲಭ್ಯವನ್ನು ನೀಡಬಹುದಾಗಿದೆ.
- ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ನೀಡುವಾಗ ಶೇ.23 ಸಹಾಯಧನವನ್ನು ಪರಿಶಿಷ್ಠ ಜಾತಿ, ಪರಿಶಿಷ್ಟ ವರ್ಗಗಳ ರೈತರಿಗೆ ಹಾಗು ಸರ್ಕಾರದ ನಿಯಮಾನುಸಾರ ಹಿಂದುಳಿದ ವರ್ಗದ ರೈತರಿಗೆ ಹಾಗೂ ಅಲ್ಪಸಂಖ್ಯಾತ ರೈತರಿಗೆ ವಿತರಿಸತಕ್ಕದ್ದು.
- ಸದರಿ ಯೋಜನೆಯಡಿ ರೈತ ಮಹಿಳೆಯರಿಗೆ ಶೇ.33 ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ಮತ್ತು ಮಧ್ಯಮವರ್ಗದ ರೈತರಿಗೆ ಆದ್ಯತೆ ನೀಡುವುದು.

1. ಹನಿ ನೀರಾವರಿಯಲ್ಲಿ ವಿವಿಧ ಬೆಳೆಗಳ ಅಂತರಕ್ಕೆ ಕೇಂದ್ರ ಸರ್ಕಾರವು ನೀಡಿರುವ ಸೂಚ್ಯಂಕ ದರಗಳು

ಕಡಿಮೆ ಅಂತರದ ಬೆಳೆಗಳಿಗೆ (ರೂ.ಗಳಲ್ಲಿ)

| | ವಿಸ್ತೀರ್ಣ(ಹೆ.) | | | |
|---|---|---|---|---|
| ಅಂತರ(ಮಿXಮೀ) | 0.2 | 0.4 | 1.0 | 2.0 |
| 2.5x0.6 | 15463 | 26791 | 54909 | 100906 |
| 1.8 x0.6 | 18807 | 32909 | 70086 | 132653 |
| 1.2 x0.6 | 24063 | 43816 | 97598 | 185565 |

2. ಪೋರ್ಟಬಲ್ ತುಂತುರು ನೀರಾವರಿ ಮಾದರಿಗೆ ಕೇಂದ್ರ ಸರ್ಕಾರವು ನೀಡಿರುವ ಸೂಚ್ಯಂಕ ದರಗಳು

(ರೂ.ಗಳಲ್ಲಿ)

| ವಿಸ್ತೀರ್ಣ(ಹೆ.) | 63ಮಿಮೀ | 75ಮಿಮೀ |
|---|---|---|
| 0.4 | 10399 | ಅನ್ವಯಿಸುವುದಿಲ್ಲ |
| > 0.4–1.0 | 16993 | 19044 |
| >1.0–2.0 | 24533 | 27280 |

**2013–14 ನೇ ಸಾಲಿನ ಜಿಲ್ಲಾವಲಯ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ:2435–00–101–0–30 (ಜಿಲ್ಲಾ ವಲಯ) ಜಿಲ್ಲಾವಾರು ಆರ್ಥಿಕ ಗುರಿ**

**(ಆರ್ಥಿಕ ಲಕ್ಷ ರೂ ಗಳಲ್ಲಿ)**

| ಕ್ರ. ಸಂ | ಜಿಲ್ಲೆ | ನಿಗಧಿಪಡಿಸಿದ ಮೊತ್ತ |
|---|---|---|
| 1 | ಬಾಗಲಕೋಟೆ | 65.87 |
| 2 | ಬೆಂಗಳೂರು (ಗ್ರಾ) | 2.00 |
| 3 | ಬೆಂಗಳೂರು (ನ) | 2.00 |
| 4 | ಬೆಳಗಾವಿ | 63.43 |
| 5 | ಬಳ್ಳಾರಿ | 0.00 |
| 6 | ಬೀದರ್ | 20.00 |
| 7 | ಬಿಜಾಪುರ | 48.00 |
| 8 | ಚಾಮರಾಜನಗರ | 10.00 |
| 9 | ಚಿಕ್ಕಬಳ್ಳಾಪುರ | 11.00 |
| 10 | ಚಿಕ್ಕಮಗಳೂರು | 20.00 |
| 11 | ಚಿತ್ರದುರ್ಗ | 15.00 |
| 12 | ದ.ಕನ್ನಡ | 2.00 |
| 13 | ದಾವಣಗೆರೆ | 20.00 |
| 14 | ಧಾರವಾಡ | 45.20 |
| 15 | ಗದಗ | 20.00 |
| 16 | ಗುಲ್ಬರ್ಗಾ | 32.00 |
| 17 | ಹಾಸನ | 25.00 |
| 18 | ಹಾವೇರಿ | 40.00 |
| 19 | ಕೊಡಗು | 20.00 |
| 20 | ಕೋಲಾರ | 5.50 |
| 21 | ಕೊಪ್ಪಳ | 35.22 |
| 22 | ಮಂಡ್ಯ | 6.00 |
| 23 | ಮೈಸೂರು | 20.00 |
| 24 | ರಾಯಚೂರು | 15.00 |
| 25 | ರಾಮನಗರ | 2.00 |
| 26 | ಶಿವಮೊಗ್ಗ | 34.50 |
| 27 | ತುಮಕೂರು | 16.00 |
| 28 | ಉಡುಪಿ | 2.25 |
| 29 | ಉತ್ತರ ಕನ್ನಡ | 15.00 |
| 30 | ಯಾದಗಿರಿ | 14.00 |
| ಒಟ್ಟು | | 626.97 |

## ನಮೂನೆ – 1

2013–14 ನೇ ಸಾಲಿನ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯಡಿ ಸಾಧಿಸಿದ ಪ್ರಗತಿ ವರದಿ.

ಜಿಲ್ಲೆ : ಭೌತಿಕ : ಹೆಕ್ಟೇರ್ ಗಳಲ್ಲಿ ಆರ್ಥಿಕ : ಲಕ್ಷ ರೂ ಗಳಲ್ಲಿ ಮಾಹೆ:

| ಕ್ರ.ಸಂ | ಘಟಕಗಳು | ಭೌತಿಕ | | ಆರ್ಥಿಕ | | | | | |
|---|---|---|---|---|---|---|---|---|---|
| | | | | ಜಿಲ್ಲಾ ವಲಯ | | ಕೇಂದ್ರ ವಲಯ | | ಒಟ್ಟು | |
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
| 1 | ಹನಿ ನೀರಾವರಿ | | | | | | | | |
| 2 | ತುಂತುರು ನೀರಾವರಿ | | | | | | | | |
| | ಒಟ್ಟು | | | | | | | | |

## ನಮೂನೆ – 2

2013–14 ನೇ ಸಾಲಿನ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯಡಿ ಸಾಧಿಸಿದ ಪ್ರಗತಿ ವರದಿ.

ಜಿಲ್ಲೆ: ಭೌತಿಕ : ಹೆಕ್ಟೇರ್ ಗಳಲ್ಲಿ ಆರ್ಥಿಕ : ಲಕ್ಷ ರೂ ಗಳಲ್ಲಿ ಮಾಹೆ:

| ಕ್ರ.ಸಂ | ಘಟಕಗಳು | ಭೌತಿಕ | | ಆರ್ಥಿಕ | | | | | |
|---|---|---|---|---|---|---|---|---|---|
| | | | | ರಾಜ್ಯ ವಲಯ | | ಕೇಂದ್ರ ವಲಯ | | ಒಟ್ಟು | |
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
| 1 | ಹನಿ ನೀರಾವರಿ | | | | | | | | |
| 2 | ತುಂತುರು ನೀರಾವರಿ | | | | | | | | |
| | ಒಟ್ಟು | | | | | | | | |

## 2013–14 ನೇ ಸಾಲಿನ ಕೃಷಿ ಯಾಂತ್ರೀಕರಣ ಯೋಜನೆಯಡಿ ಚಟುವಟಿಕೆಗಳ ವೇಳಾ ಪಟ್ಟಿ

| ಕ್ರ.ಸಂ | ಚಟುವಟಿಕೆಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆ | ಅಕ್ಟೋ | ನವೆಂ | ಡಿಸೆಂ | ಜನ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|---|
| 1 | 2012–13ನೇ ಸಾಲಿನ ಪ್ರಗತಿ ವರದಿಗಳನ್ನು ಜಿಲ್ಲೆಗಳಿಂದ ಕ್ರೋಡೀಕರಿಸುವುದು. | | | | | | | | | | | | |
| 2 | 2012–13ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಸಾಧಿಸಿದ ಪ್ರಗತಿಗೆ ಉಪಯೋಗಿತ ಪ್ರಮಾಣ ಪತ್ರಗಳನ್ನು ಜಿಲ್ಲೆಗಳಿಂದ ಕ್ರೋಡೀಕರಿಸುವುದು. | | | | | | | | | | | | |
| 3 | 2013–14 ನೇ ಸಾಲಿಗೆ ಕ್ರಿಯಾ ಯೋಜನೆ ತಯಾರಿಸುವುದು | | | | | | | | | | | | |
| 4 | ಅನುದಾನ ಬಿಡುಗಡೆಗೊಳಿಸುವುದು | | | | | | | | | | | | |
| 5 | ಕೃಷಿ ಯಂತ್ರೋಪಕರಣ ವಿತರಣೆಯ ಸಾಧನೆ ಬಗ್ಗೆ ಪರಿಶೀಲಿಸುವುದು | | | | | | | | | | | | |
| 6 | ಜಿಲ್ಲಾವಾರು ಪ್ರಗತಿ ಪರಿಶೀಲಿಸುವು ದು ಮತ್ತು ಫಲಾನುಭವಿ ಪಟ್ಟಿಯನ್ನು ಪಡೆಯುವುದು | | | | | | | | | | | | |
| 7 | 2014–15 ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸುವುದು | | | | | | | | | | | | |

## 2013–14 ನೇ ಸಾಲಿನ ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆಯಡಿ ಚಟುವಟಿಕೆಗಳ ವೇಳಾ ಪಟ್ಟಿ

| ಕ್ರ.ಸಂ | ಚಟುವಟಿಕೆಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|---|
| 1 | 2012–13ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಸಾಧಿಸಿದ ಪ್ರಗತಿಗೆ ಉಪಯೋಗಿತ ಪ್ರಮಾಣ ಪತ್ರಗಳನ್ನು ಜಿಲ್ಲೆಗಳಿಂದ ಕ್ರೋಡೀಕರಿಸುವುದು. | | | | | | | | | | | | |
| 2 | 2013–14 ನೇ ಸಾಲಿಗೆ ಕ್ರಿಯಾ ಯೋಜನೆ ತಯಾರಿಸುವುದು | | | | | | | | | | | | |
| 3 | ಅನುದಾನ ಬಿಡುಗಡೆಗೊಳಿಸುವು ದು | | | | | | | | | | | | |
| 4 | ಲಘು ನೀರಾವರಿ ಘಟಕಗಳ ವಿತರಣೆಯ ಸಾಧನೆ ಬಗ್ಗೆ ಪರಿಶೀಲಿಸುವುದು | | | | | | | | | | | | |
| 5 | ಜಿಲ್ಲಾವಾರು ಪ್ರಗತಿ ಪರಿಶೀಲಿಸುವು ದು | | | | | | | | | | | | |
| 6 | 2014–15 ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸುವುದು | | | | | | | | | | | | |